## ರಂಗವಿಠಲ

### ಮಾಸಪತ್ರಿಕೆ ಚಂದಾವಿವರ (Subscription)

| | |
|---|---|
| **ದಶವಾರ್ಷಿಕ ಚಂದಾ** (Ten Years) | **900-00** |
| **ಪಂಚವಾರ್ಷಿಕ ಚಂದಾ** (Five Years) | **450-00** |
| **ತ್ರೈವಾರ್ಷಿಕ ಚಂದಾ** (Three Years) | **275-00** |
| **ವಾರ್ಷಿಕ ಚಂದಾ** (Annual) | **100-00** |
| **ಬಿಡಿ ಪ್ರತಿ** (Per Copy) | **10-00** |

### ಜಾಹೀರಾತು ವಿವರ (Advertisement Tariff)

**With Colourful Photo's Size D 1/8 Multicolour Attractive Cover**

| | | | |
|---|---|---|---|
| Back Cover | 5000-00 | Half Page | 1250-00 |
| Inner Cover | 3000-00 | Full Page | 2000-00 |

### ಚಂದಾದಾರರಿಗೆ ಮಾಹಿತಿ

1) ಕಳೆದ **ಐದು ವರ್ಷಗಳಿಂದ ಪ್ರತಿ ತಿಂಗಳ 15 ರಂದು** ಬೆಂಗಳೂರಿನಿಂದ **ರಂಗವಿಠಲ** ಮಾಸಪತ್ರಿಕೆ ಪ್ರಕಟವಾಗುತ್ತಿದೆ. ಇದು 56ನೆಯ ಸಂಚಿಕೆ.

2) ಪ್ರಾಯಶಃ ಇಡೀ **ಭಾರತದಲ್ಲಿ ದಾಸಸಾಹಿತ್ಯ ಸಂಶೋಧನೆ ಮತ್ತು ಧರ್ಮವಿಚಾರದ ಮಾಸಪತ್ರಿಕೆಯೊಂದು ಕಡಿಮೆ ದರದಲ್ಲಿ ಪ್ರಕಟವಾಗುವುದೇ ಅದಲ್ಲಿ ಅದು** ರಂಗವಿಠಲ .

3) ನಿಮಗೂ ಚಂದಾದಾರರಾಗಲು ಆದರದ ಸ್ವಾಗತ ಮತ್ತು ಪೂರ್ಣ ಅವಕಾಶವಿದೆ. ಚಂದಾದಾರರಾದ ಕೂಡಲೇ ತಮ್ಮ ಸಂಖ್ಯೆ *(Subscribers No.)* ಗುರುತಿಟ್ಟುಕೊಳ್ಳುತ್ತೇವೆ. ಇದು ಪತ್ರಿಕೆ-ಚಂದಾದಾರರ ವ್ಯವಹಾರಕ್ಕೆ ಅಗತ್ಯ.

4) ಹೊಸ ಚಂದಾದಾರರಾಗಲು ತಾವು ನೀಡಬೇಕಾದ ಮಾಹಿತಿ ಹೀಗಿದೆ.

ನಿಮ್ಮ ಹೆಸರು :-
ಅಂಚೆ ವಿಳಾಸ :-
ಫೋನ್/ಮೊಬೈಲ್ ನಂ.:
ಫೇಬ್ರವರಿ-2010 ತಿಂಗಳಿನಿಂದಲೇ ತಾವು ಚಂದಾದಾರರಾಗಲು ಅವಕಾಶವಿದೆ.
ಡಿ.ಡಿ ಅಥವಾ *M.O.* ಮೂಲಕ ಚಂದಾ ಸ್ವೀಕೃತ. ಬೆಂಗಳೂರಿನಲ್ಲಿರುವವರು ಚೆಕ್ ಕೊಡಬಹುದು.
ಬೆಂಗಳೂರಿನಿಂದ ಹೊರಗಿರುವವರು ಚೆಕ್ ಕಳುಹಿಸುವುದೇ ಆದಲ್ಲಿ ದಯಮಾಡಿ ವಾರ್ಷಿಕ ಚಂದಾ ರೂ. 150/- ಕಳುಹಿಸಬೇಕಾಗುತ್ತದೆ. (ಇದು ಚೆಕ್ ಕ್ಲೀಯರ್‌ಗ್ಸ್ ವೆಚ್ಚ)

ನಮ್ಮ ವಿಳಾಸ: ***EDITOR, RANGAVITTALA***
*Sri Sripadaraja Mutt, No. 58, Raghavendra Colony,*
*Chamarajapet, Bangalore-560 018.*
*Phone 26914637*



# ರಂಗವಿಠಲ

ಶ್ರೀ ಶ್ರೀಪಾದರಾಜರ ಭಕ್ತಿಸಾಹಿತ್ಯ, ದಾಸಸಾಹಿತ್ಯ, ದೇವರನಾಮ, ಧರ್ಮಚಿಂತನೆ ಮತ್ತು ಜ್ಞಾನಸತ್ರಕ್ಕೆ ಮೀಸಲಾದ ಮಾಸಪತ್ರಿಕೆ

**ವಿರೋಧಿ, ಮಾಘ**

**ಫೆಬ್ರವರಿ, 2010**
**February-2010**

(ಜಿಲ್ಲಾದಂಡಾಧಿಕಾರಿಗಳ ಮತ್ತು RNI ಅಧಿಕೃತ ಅನುಮೋದನೆ ನಂತರ ಇದು
**(ಸಂಪುಟ 1 ಸಂಚಿಕೆ 7)**
ಪತ್ರಿಕೆಯು ಪ್ರತಿ ತಿಂಗಳು 15 ರಂದು ಪ್ರಕಟವಾಗುತ್ತದೆ.)

Editor :
**H.B. Lakshminarayana**
No. 58, Raghavendra Colony, Chamarajpet,
Bangalore-560 018 Phone : (080) 26914637

Publisher :
**Sri Sripadaraja Mutt**
Mulbagal, Kolar
Phone: **08159-290839**

Printer :
**Sri Sripadaraja Printers & Publisher**
No. 58, Raghavendra Colony, Chamarajpet,
Bangalore-560 018. Phone : (080) 26914637

**Address: Postal / Courier / Email**

**Sri Sripadaraja Mutt**
No. 58, Raghavendra Colony, Chamarajpet,
Bangalore-560 018. Phone : (080) 26914637
Webmail: Sripadarajamutt.org
Email: rangavittala.sripada@gmail.com



## ಸಂದೇಶ

**ತ್ರಿಜಗವಂದ್ಯನ ಪಾಡು ಭಕ್ತಿಯನ್ನು ಬೇಡು**
**ಗಜೇಂದ್ರನ ಕಾಯ್ದ ಶ್ರೀಕೃಷ್ಣನ ಸ್ಮರಣೆ ಮಾಡು**
**ಪುರಂದರವಿಠಲರಾಯನ ಬಿಡದೆ ಕೊಂಡಾಡು॥**

ತ್ರಿಜಗದ್ವಂದ್ಯನನ್ನು ಪಾಡುವುದರ ಮೂಲಕ ಅವನಲ್ಲಿ ಭಕ್ತಿಯನ್ನು ಬೇಡಬೇಕು. ನವವಿಧಭಕ್ತಿಯಲ್ಲಿ ಪರಮಮುಖ್ಯವಾದುದು ನಾಮ ಸಂಕೀರ್ತನೆಯು. ಕಲಿಯುಗದಲ್ಲಿ **ನಾಮ ಸಂಕೀರ್ತನೆ**ಗೆ ಮಹತ್ವನೀಡಿದ್ದಾರೆ. ಹರಿದಾಸರುಗಳೆಲ್ಲರ ಮುಖ್ಯ ತತ್ವ ಪಾಡುವುದೇ ಆಗಿದೆ.

ಈ ಉಗಾಭೋಗದ ಸಂದೇಶವೆನೆಂದರೆ ಗಜೇಂದ್ರನಿಗೆ ಮೋಕ್ಷವನ್ನು ಅನುಗ್ರಹಿಸಿದಂತೆ **ಶ್ರೀಕೃಷ್ಣನ ಸ್ಮರಣೆ**ಯೇ ಕಲಿಯುಗದ ಸಾಧನೆಯ ಮಾರ್ಗವೆಂಬುದು ಸರ್ವವಿದಿತ.

ಧ್ರುವಾಂಶ ಸಂಭೂತರಾದ ಶ್ರೀಪಾದರಾಜರೇ ಪ್ರವರ್ತಿಸಿದ ದಾಸಸುಧೆಯ ಸಾರಾಂಶವನ್ನೇ ಪುರಂದರದಾಸರು ತಮ್ಮ ಉಗಾಭೋಗದಲ್ಲಿ ವ್ಯಕ್ತಪಡಿಸಿದ್ದಾರೆ. ದಾಸರ ಉಗಾಭೋಗಗಳ ವಿಶೇಷ ಅಧ್ಯಯನಕ್ಕಾಗಿಯೇ ಮೀಸಲಿಟ್ಟ **ರಂಗವಿಠಲ** ಭಕ್ತಿಮಾರ್ಗದ ಹಿರಿಮೆಯನ್ನು ಸಾರುತ್ತಿದೆ.

ಭಕ್ತಿಪಂಥವು ಮುಕ್ತಿ ಹೊಂದಲು ಏಕೈಕ ಮಾರ್ಗ ಎಂಬುದೆ ಉಗಾಭೋಗಗಳ ಸಂದೇಶ. ಈ ದಿಶೆಯಲ್ಲಿ ಓದುಗರ ಲೇಖನಗಳು ಮೂಡಿಬಂದಿರುವುದು ಸಂತಸದ ವಿಷಯ. ಭಗವಂತನ ಸಖ್ಯದಲ್ಲಿ ದಾಸರ ಉಗಾಭೋಗಗಳು ಕಲಿಯುಗದ ಸಾಧನೆಯ ಮಾರ್ಗವಾಗಲೆಂದು ಹಾರೈಸುತ್ತಾ ಮಾಡುವ.

**ನಾರಾಯಣಸ್ಮರಣೆಗಳು**
**ಶ್ರೀ ಶ್ರೀ ವಿಜ್ಞಾನನಿಧಿತೀರ್ಥ ಶ್ರೀಪಾದಂಗಳವರು**



## ಮಾರ್ಚ್ 2010ರ ಸಂಚಿಕೆಯಲ್ಲಿ

ವಾದಿರಾಜತೀರ್ಥವಿರಚಿತ ಗುಂಡಕ್ರಿಯೆ ಬಗ್ಗೆ ಚಿಂತನಧಾರೆಯನ್ನು ರಂಗವಿಠ್ಠಲ ನೀಡಬಯಸುತ್ತದೆ.

ಇವುಗಳಿಗೆ ಸಪ್ರಮಾಣವಾದ ಮತ್ತು ಶುದ್ಧವಾದ ಕೃತಿಗಳ ಮೂಲಕ ತಮ್ಮ ಅಧ್ಯಯನ ಲೇಖನಗಳನ್ನು ಮಾರ್ಚ್- 2010ರ ರಂಗವಿಠಲ ಪತ್ರಿಕೆಗಾಗಿ ಕಳುಹಲು ಕೋರಲಾಗಿದೆ.

ಓದುಗರು ತಮ್ಮ ಲೇಖನಗಳನ್ನು **ಫೆಬ್ರವರಿ 25**ರೊಳಗೆ ಕಳುಹಿಸಬೇಕೆಂದು ಕೋರಿದೆ. ತಮ್ಮ ಲೇಖನಗಳು ಶುದ್ಧಕೃತಿ ಮತ್ತು ತತ್ಸಂಬಂಧವಾದ ಪ್ರಮಾಣಗಳ ಪುರಸ್ಸರವಾಗಿದ್ದರೆ ಉತ್ತಮ.

**ಅಧಿಕಮಾಸ ನಿಯಮಕನಾದ ಶ್ರೀ ಪುರುಷೋತ್ತಮನ** ಬಗ್ಗೆ **ದಾಸರುಗಳ** ಚಿಂತನೆ ಧಾರೆಯನ್ನು ಏಪ್ರೀಲ್ 2010ರ ಸಂಚಿಕೆಯಲ್ಲಿ ರಂಗವಿಠ್ಠಲ ನೀಡಬಯಸುತ್ತದೆ. ತಮ್ಮ ಲೇಖನಗಳಲ್ಲಿ ಆಧಾರಿತ ಕೃತಿಗಳನ್ನು ಆಯ್ದುಕೊಂಡಿರುವ ಗ್ರಂಥದ ಹೆಸರು, ಪುಟ, ಕೀರ್ತನೆಗಳ ಸಂಖ್ಯೆಯನ್ನು ಹಾಗೂ ವಿಮರ್ಶಿಸಿರುವ ಕೃತಿ ಮತ್ತು ಅದರ ಲೇಖಕರ ಬಗ್ಗೆ ಮಾಹಿತಿಯನ್ನು ನೀಡಲು ಕೋರಿದೆ.

**ಸಂಪಾದಕ,** ರಂಗವಿಠಲ

**ಶ್ರೀ ಶ್ರೀಪಾದರಾಜ ಮಠ (ಮುಳಬಾಗಿಲು ಮಠ) ಮೂಲ ಬೃಂದಾವನ ಸನ್ನಿಧಾನ,**
**ನರಸಿಂಹತೀರ್ಥ, ಮುಳಬಾಗಿಲು, ಕೋಲಾರ ಜಿಲ್ಲಾ, ದೂರವಾಣಿ: 08159-290839**

ಶ್ರೀಕ್ಷೇತ್ರದಲ್ಲಿ ನಡೆಯುವ ದೈನಂದಿನ ಕಾರ್ಯಕ್ರಮಗಳ ವಿವರ:-

ಬೆಳಿಗ್ಗೆ 05-30 ನಿರ್ಮಾಲ್ಯ ವಿಸರ್ಜನೆ.
08-30 ವಿಶೇಷ ದಿನಗಳಲ್ಲಿ ಶ್ರೀ ಯೋಗನರಸಿಂಹ ದೇವರಿಗೆ ಪಂಚಾಮೃತ (ಶ್ರೀಮಠದ ಕಟ್ಟಳೆ ಪ್ರಕಾರ ನೆರವೇರಿಸುವುದು).
8-30 ಶ್ರೀ ಯೋಗನರಸಿಂಹ ದೇವರ ಉತ್ಸವ ಮೂರ್ತಿಗೆ ಪ್ರತಿನಿತ್ಯ ಮಧು ಅಭಿಷೇಕ
09-00 ರಿಂದ 09-30 ಶ್ರೀ ಯೋಗನರಸಿಂಹ ದೇವರ ಪೂಜೆ.
10-00 ರಿಂದ 10-30 ಶ್ರೀ ಯೋಗನರಸಿಂಹ ದೇವರಿಗೆ ಅರ್ಚನೆ.
10-45 ರಿಂದ 11-00 ಶ್ರೀ ಶ್ರೀಪಾದರಾಜರಿಗೆ ಪಂಚಾಮೃತ ಅಭಿಷೇಕ.
11-00 ರಿಂದ 11-30 ಶ್ರೀ ಶ್ರೀಪಾದರಾಜರಿಗೆ ಸೇವೆಗಳು.
11-45 ನೈವೇದ್ಯ (ಶ್ರೀ ಯೋಗನರಸಿಂಹ ದೇವರು, ಶ್ರೀಮುಖ್ಯಪ್ರಾಣದೇವರು ಮುಂತಾದೆಡೆ)
12-00 ಗಂಟೆಗೆ ಹಸ್ತೋದಕ ಮತ್ತು ಮಹಾಮಂಗಳಾರತಿ
12-30 ರಿಂದ 02-00ರ ವರೆಗೆ ಮಹಾಪ್ರಸಾದ.
ಸಂಜೆ 06-00 ರಿಂದ 06-45 ಕ್ಕೆ ವಿಷ್ಣು ಸಹಸ್ರನಾಮ ಅರ್ಚನೆ, ದೀಪೋತ್ಸವಾದಿಗಳು
07-30 ಸಂಜೆ ಮಹಾಮಂಗಳಾರತಿ.
08-00ರ ವರೆಗೆ ಸಾರ್ವಜನಿಕ ದರ್ಶನಕ್ಕೆ ಅವಕಾಶ.

ಈ ಮೇಲ್ಕಂಡ ವ್ಯವಸ್ಥೆಯನ್ನು ದಿ. 1-2-2010ರಿಂದ ಶ್ರೀಗಳವರ ಅಪ್ಪಣೆಯ ಮೇರೆಗೆ ನಡೆಸುವಂತೆ ತೀರ್ಮಾನಿಸಲಾಗಿದೆ.

ಭಕ್ತಾದಿಗಳು ಕಾರ್ಯಕ್ರಮದ ವ್ಯವಸ್ಥೆಯ ದೃಷ್ಟಿಯಿಂದ ಸಹಕರಿಸಿ, ಪ್ರಯೋಜನವನ್ನು ಪಡೆಯಬೇಕಾಗಿ ತಿಳಿಸಲಾಗಿದೆ.

**ವಿಶೇಷ ಸೂಚನೆ:-** ಪಿತೃಕಾರ್ಯ ಮಾಡುವವರು ಆ ದಿನ ಬೆಳಿಗ್ಗೆ 9-00ಕ್ಕೆ ಸರಿಯಾಗಿ ಹಾಜರಿರತಕ್ಕದ್ದು, ತಡವಾಗಿ ಬಂದವರಿಗೆ ಅವಕಾಶವಿರುವದಿಲ್ಲ.

## ಶ್ರೀ ವಿರೋಧಿನಾಮ ಸಂವತ್ಸರ, ಫಾಲ್ಗುಣಮಾಸ

**ಫೆಬ್ರವರಿ 2010**

15. ಪಯೋವ್ರತಾರಂಭ.
16. ಶ್ರೀಗುರುಸಾರ್ವಭೌಮರ ಪಟ್ಟಾಭಿಷೇಕವಾದ ದಿನ.
21. ಶ್ರೀಗುರುಸಾರ್ವಭೌಮರ ಜನ್ಮದಿನೋತ್ಸವ.
25. **ಸರ್ವೇಷಾಮೇಕಾದಶಿ (ಅಮಲಕಿ).**
26. ಪಯೋವ್ರತಸಮಾಪ್ತಿ, ಪಾರಣೆ.
28. ಹೋಳಿಹುಣ್ಣಿಮೆ, ಬ್ರಹ್ಮಸಾವರ್ಣಿಮನ್ವಾದಿ ಕಾಮದಹನ, **ಶ್ರೀಸುಜ್ಞಾನನಿಧಿತೀರ್ಥರ ಪುಣ್ಯ.ದಿನ. ಮುಳಬಾಗಿಲು ಶ್ರೀಪರಶುರಾಮತೀರ್ಥರ ಪು.ದಿನ.** (ಶ್ರೀರಂಗ).

**ಮಾರ್ಚ್ 2010**

01. ವಸಂತಪ್ರತಿಪತ್, ಧೂಲೀವಂದನ, ಕರಿದಿನ. **ಶ್ರೀವಿಜಯನಿಧಿ ತೀರ್ಥರ ಮಹಾಸಮಾರಾಧನೆ ಪೂರ್ವಾರಾಧನೆ.**
02. **ಶ್ರೀವಿಜಯನಿಧಿತೀರ್ಥರ ಮಧ್ಯಾರಾಧನೆ, ಶ್ರೀಸುಧೀಂದ್ರತೀರ್ಥರ ಪುಣ್ಯ.ದಿನ.** (ಆನೇಗೊಂದಿ).
03. ಕಲ್ಪಾದಿ, **ಶ್ರೀವಿಜಯನಿಧಿತೀರ್ಥರ ಉತ್ತರಾರಾಧನೆ, ಶ್ರೀವಾದಿರಾಜತೀರ್ಥರ ಆರಾಧನೆ** (ಸೋಂದಾ).
04. **ಶ್ರೀವ್ಯಾಸರಾಜರ ಆರಾಧನೆ** (ನವವೃಂದಾವನ ಆನೇಗೊಂದಿ).
05. ರಂಗಪಂಚಮೀ.
07. ಪೂರ್ವೇದ್ಯುಶ್ರಾದ್ಧ. ಅಷ್ಟಕಾಶ್ರಾದ್ಧ, **ಶ್ರೀಉದ್ದಂಡರಾಮಚಂದ್ರತೀರ್ಥರ ಪುಣ್ಯ.ದಿನ.** (ಪೆನುಕೊಂಡ)
08. **ಶ್ರೀಸುಧಿನಿಧಿತೀರ್ಥರ ಪುಣ್ಯ.ದಿನ.** (ಪಳ್ಳಿಪಾಳ್ಯ) ಅನ್ವಷ್ಟಕ್ಯಶ್ರಾದ್ಧ.
11. **ಸರ್ವೇಷಾಮೇಕಾದಶೀ (ಪಾಪವಿಮೋಚನೀ).**
12. ಶ್ರವಣೋಪವಾಸ,
15. ದರ್ಶ. ಯುಗಾದಿಅಮಾವಾಸ್ಯೆ, ಮನ್ವಾದಿ.
16. ಚಾಂದ್ರಮಾನಯುಗಾದಿ, ಶ್ರೀ ವಿಕೃತಿ ಸಂವತ್ಸರಾರಂಭ,
ಶ್ರೀಗತಶಕ 1932.





## ಸಂದೇಶ

**ದಾಸನಾಗುವದಕ್ಕೆ ಏಸು ಜನ್ಮದ ಸುಕೃತ**
**ನಾಶರಹಿತ ನಿನ್ನ ದಾಸರ ದಾಸ್ಯ**
**ಲೇಸಾಗಿ ಕೊಡು ಕಂಡ್ಯ ಪುರಂದರವಿಠಲ॥**

ಭಗವಂತನ ಅಭಯ ಹಸ್ತ ಭಕ್ತನ ನಿರ್ಭಯತೆಯನ್ನು ಹೋಗಲಾಡಿಸುವ ಸೂತ್ರವೇ ದಾಸರು ಹರಿಸಿದ ಉಗಾಭೋಗ. ಹಲವು ಜನ್ಮಗಳ ಸುಕೃತದಲ್ಲಿ ಬಂದ ನರಜನ್ಮದ ಹಿರಿಮೆಯನ್ನು ಸಾರುವ ಮಂತ್ರವಿದು.

ಸರ್ವತಂತ್ರ ಸ್ವತಂತ್ರನ ದಾಸರಾಗಲು ಜನಮಾನಸದಲ್ಲಿ ಹರಿಭಕ್ತಿಯನ್ನು ಹರಿಸುವ ತಂತ್ರವಾಗಿ ಉಗಾಭೋಗಗಳು ಹೊರಟಿವೆ.

**ಈಶ ನೀನು-ದಾಸ ನಾನು** ಎಂದು ಸಾರಿದ ಹನುಮನ ಮತವೇ ದಾಸ ಪಂಥವಾಯಿತು. ಶ್ರೀಪಾದರಾಜರಿತ್ತ ಉಗಾಭೋಗದ ಸಂದೇಶದಂತೆ ಕೇಶವನೊಲುಮೆಯ ಸಿದ್ಧಿಗಾಗಿ ಕಲಿಯುಗದಲ್ಲಿ ಹರಿನಾಮ ಸಂಕೀರ್ತನೆಯ ಮಾರ್ಗ ಜನಮನದಲ್ಲಿ ರಾಗ ದ್ವೇಷಗಳನ್ನು ಎದುರಿಸುವ ಚೈತನ್ಯ ಜಾಗೃತಿಯಾಗಿದೆ.

ನಾಶರಹಿತನಾದ ಭಗವಂತನಲ್ಲಿ ಭಕ್ತಿ ಬೇಡುವ ಸ್ಫೂರ್ತಿಯಂತೆ ಉಗಾಭೋಗಗಳ ಚಿಂತನೆಯಲ್ಲಿ ಪುರಂದರದಾಸರ ಉಪಕಾರ ಸ್ಮರಣೆ ಮಾಡುವಂತಾಗಿದೆ. ಈ ದಿಶೆಯಲ್ಲಿ ಸಾಗಿಬಂದ **ರಂಗವಿಠಲ** ಸಂತಸತಂದಿದೆ. ದಾಸಪಂಥದ ಭಕ್ತಿಸಿಂಚನದಲ್ಲಿ ತೊಡಗಿಸಿಕೊಂಡ ಲೇಖಕರಿಗೆ ಶುಭ ನೀಡಲೆಂದು ನಮ್ಮ ಉಪಾಸ್ಯಮೂರ್ತಿ **ರಂಗವಿಠಲ**ನಲ್ಲಿ ಪ್ರಾರ್ಥಿಸುತ್ತಾ ಮಾಡುವ.

**ನಾರಾಯಣಸ್ಮರಣೆಗಳು**
**ಶ್ರೀ ಶ್ರೀ ಕೇಶವನಿಧಿತೀರ್ಥ ಶ್ರೀಪಾದಂಗಳವರು**

## ಸಂಪಾದಕೀಯ

**ಭವರೋಗ ವೈದ್ಯನ ಧ್ಯಾನವ ಮಾಡಿ।**
**ಸರ್ವಭುಕ್ ಶ್ರೀ ಪುರಂದರವಿಠಲರಾಯನ।।**

ದಾಸಸಾಹಿತ್ಯ ಗಂಗೆಯ ಉಗಮ ವೇದಗಳಲ್ಲಿ ಅಡಗಿದೆ ಎಂಬುದು ವಿವಾದರಹಿತ. ಸಪ್ತಸ್ವರಗಳು ನಾದಬ್ರಹ್ಮನ ಉಪಾಸನೆಗಾಗಿ ಹರಿಯುತ್ತಿರುವ ಬೀಜಾಕ್ಷರಗಳು. ವೈದ್ಯ ಪುರಂದರವಿಠಲನು ಭವರೋಗ ಪರಿಹರಿಸಲು ಸಂಗೀತದ ಸ್ವರಗಳ ಅಮೃತಪಾನವನ್ನು ಚಿಕಿತ್ಸೆಯನ್ನಾಗಿ ಬಳಸುತ್ತಾನೆ. ಕುಂಡಲಿಶಯನ ಸಪ್ತಗಿರೀಶನ ಜಾಗೃತಿ ಮೂಡಿಸುವ ದಾಸರ ಉಗಾಭೋಗಗಳು ಮುಕ್ತಿಪ್ರದಾಯಕ.

**ಜ್ಞಾನ-ಭಕ್ತಿ ವೈರಾಗ್ಯ ಸಂಗಮವೇ** ಮೂರ್ತಿವೆತ್ತಾಗಿ ದಾಸಸಂಪದ ದೀಕ್ಷೆ ಹೊತ್ತುನಿಂತ ಯತಿ ಪುಂಗವ **ಶ್ರೀಪಾದರಾಜರ** ಉಪಕಾರ ಅಂತಿಂತಹುದಲ್ಲ! ಅಂತಹ **ಶ್ರೀಪಾದರಾಜರ**ನ್ನು ಅನುಸರಿಸಿ ದಾಸಸಂಪಥವನ್ನು ಬೆಳೆಗಿಸಿದ ಪುರಂದರದಾಸರೆ ಮೊದಲಾದ ಎಲ್ಲ ಹರಿದಾಸರುಗಳು ಉಗಾಭೋಗದಲ್ಲಿ ವ್ಯಾಸ ವಾಙ್ಮಯವನ್ನು ಅಭಿವೃದ್ಧಿಪಡಿಸಿದರು.

ಅನನ್ಯವಾದ ಉಗಾಭೋಗಗಳಿಂದ ಕನ್ನಡ ಸಾರಸ್ವತ ಸಿರಿಯನ್ನು ಉದ್ಧೀಪಿಸಿದ ಕೀರ್ತಿ ಪುರಂದರದಾಸರದ್ದು . ಭಗವಂತನ ಬಿಂಬವನ್ನು ಸದಾ ಮನದಲ್ಲಿ ನೆಲೆಗೊಳಿಸಿ ಉಪಾಸನೆ ಮಾಡುವದೇ ಧ್ಯಾನ. ಹರಿನಾಮ ಸಂಕೀರ್ತನೆಯಿಂದಲೇ ಮುಕ್ತಿಯ ಸಾಧನೆಯೆಂದು ತಮ್ಮ ಅನುಭವದ ನುಡಿಮುತ್ತುಗಳಲ್ಲಿ ಸಾರಿಪೇಳಿದ ದಾಸವರ್ಗಕ್ಕೆ ನಮಿಸೋಣ.

ಪುರಂದರದಾಸರ ಉಗಾಭೋಗಗಳ **ಚಿಂತನಾ ಶಿಬಿರ ವೇದಿಕೆಯು ರಂಗವಿಠಲನ** ಓದುಗ ಹಾಗೂ ಲೇಖಕ ಬಂಧುಗಳ ಶ್ರದ್ಧೆಯಿಂದ ತುಂಬಿದೆ.

**ಸಂಪಾದಕ, ರಂಗವಿಠ**



**ಕೀರ್ತನ**
**ಚಿಂತನ**

ಮುಂದುವರಿದ ಭಾಗ

## ಶ್ರೀಪಾದರಾಜರ ಕೀರ್ತನ ಚಿಂತನ

ಶ್ರೀ ಶ್ರೀಪಾದರಾಜರು ರಂಗನನ್ನು ಸಂಭೋಧಿಸಿ **ಪೋಪು ಹೋಗೋಣ ಬಾರೋ** ಎಂದು ಕರೆಯುತ್ತಾರೆ. ಮಿಥಿಲಾಪುರಕ್ಕೆ ಹೋಗುವದಾದರೂ ಜಾನಕಿ ರಾಮರ ವಿವಾಹನೋಡಲಿಕ್ಕೆ.

ಶ್ರೀರಾಮನನ್ನು ಬಾಲ್ಯಾವಸ್ಥೆಯಿಂದ ನೆನೆಯುವ ತವಕ ಶ್ರೀಪಾದರಾಜರಿಗೆ. ಅವನ ಶಕ್ತಿಯು ಅಚಿಂತ್ಯವಾದುದು. ಬಾಲಕನಿದ್ದಾಗ ವಿಶ್ವಾಮಿತ್ರರು ಯಜ್ಞನಾಶಕರನ್ನು ಸದೆಬಡಿಯಲು ಕರೆದು ಕೊಂಡುಹೊಗುತ್ತಾರೆ. ದುಷ್ಟರನ್ನು ಸದೆಬಡಿಯುವ ಶಕ್ತಿಯು ಪರಮಾತ್ಮನಿಗೆ ಮಾತ್ರ ಇರುವದು. ಇದನ್ನೇ ಪೂರ್ಣಶಕ್ತಿಯೆಂದು ಕರೆಯಲ್ಪಡುತ್ತದೆ. ಪರಮಾತ್ಮನು ಎಲ್ಲ ಕಾಲದಲ್ಲಿಯೂ ಸಜ್ಜನರ ಹಿತಕ್ಕಾಗಿ ದುಷ್ಟಶಕ್ತಿಗಳನ್ನು ಸದೆಬಡೆಯಬಲ್ಲನು.

ಶ್ರೀರಾಮನು ಮಿಥಿಲಾನಗರವನ್ನು ಪ್ರವೇಶಿಸಿ ಅಲ್ಲಿ ಶಿವಧನುಸ್ಸನ್ನು ಲೀಲಾಜಾಲವಾಗಿ ಎತ್ತಿಹಿಡಿದ ಘಟನೆಯು ಜನಕರಾಯನ ಆಸ್ಥಾನ ಜಾನಕಿಯ ಸ್ವಯಂವರದಲ್ಲಿ ನಡೆಯುತ್ತದೆ. ಈ ಕಥೆಯನ್ನು **ಜನಕರಾಯನ ಕುವರಿಯಂತೆ** ಎಂಬ ಸಾಲಿನಿಂದ ತಿಳಿಸಲ್ಪಟ್ಟಿದೆ.ಶ್ರೀ ಶ್ರೀಪಾದರಾಜರು **ಜಾನಕಿಯ ವಿವಾಹವಂತೆ ಜಾಣನೀ ಬರಬೇಕಂತೆ** ಎಂಬ ಪದದಿಂದ ರಂಗಾ ನೀನೊಬ್ಬನೇ ಜಾನಕಿಯ ಕೈಯನ್ನು ಹಿಡಿಯಲು ಯೋಗ್ಯ. ಆದ್ದರಿಂದ ಬೇಗ ಬಾ **ಹೋಗೋಣ** ಎಂದು ಕರೆಯುತ್ತಾರೆ.

ಈ ಪ್ರದೇಶಕ್ಕೆ ಜಹ್ನು ಋಷಿಗಳು ತಮ್ಮ ತಪಸ್ಸಿನ ಪ್ರಭಾವದಿಂದ ಗಂಗೆಯನ್ನು ಬರಮಾಡಿಕೊಂಡರು. ಆದ್ದರಿಂದ ಈ ಪ್ರದೇಶದಲ್ಲಿ ಗಂಗೆಯನ್ನು ಜಾಹ್ನವಿ ಎಂದು ಕರೆಯುವದುಂಟು. ಗಂಗೆಯು ತ್ರಿವಿಕ್ರಮರೂಪಿ ಪರಮಾತ್ಮನ ಪಾದವನ್ನು ತೊಳೆಯಲು ಬಂದವಳಾದ್ದರಿಂದ ಆ ಪರಮಾತ್ಮನನ್ನು ಧ್ಯಾನಿಸಿದಂತಾಗುತ್ತದೆ.

ಇಷ್ಟೂ ವಿಷಯಗಳನ್ನೂ ಶ್ರೀ ಶ್ರೀಪಾದರಾಜರು ಆಟಿಕೆಯ ರೂಪದಲ್ಲಿ **ಪೋಪುಹೊಗೋಣ ಬಾರೋ** ರಂಗವೆಂಬ ಸಾಲಿನಲ್ಲಿ ಅಡಗಿಸಿದ್ದಾರೆ. ಹಾಗಾದರೆ ರಂಗನೊಡನೆ ಪೋಪುಹೋಗುವುದು ಮುಂದೆ ಎಲ್ಲಿಗೆ.

(ಪೋಪು.... ಮುಂದುವರೆಯುತ್ತದೆ.)

**ಲೇಖಕ: ಹೆಬ್ಬಣಿ ಜಿ. ರಾಮಚಂದ್ರ**
**ಕಪಿಲ ಪರಮಾತ್ಮ ಮಕ್ಕಳ ಭಜನಾ ಮಂಡಳಿ, ನಂ.16, 1ನೇ ಅಡ್ಡರಸ್ತೆ, ರಾಮರಾವ್ ಬಡಾವಣೆ, ಬೆಂಗಳೂರು**

**ಕೀರ್ತನ**

**ಚಿಂತನ**

**Part III Popu Hogona BAro.... Contin**

# SRIPADARAJA KRUTHI

## A DEVOTEE'S PERSPECTIVE

His power in weilding the weapons of a kshatriya at a very young age when He accompanied Vishwamitra to the forest to protect the sage's yagna from the evil forces. It shows the special attribute unique to the Lord which is "pUrNa shkatiH' . He has the power to eliminate the foes of the sajjanas at all times. For Him age is not a bar. In order to show this in an animated way the Ramayana describes in great detail , the reaction of King Dasaratha upon being approached by Vishwamitra to send young Rama along with him. The entire scenes when played out in the mind's eye gives a glimpse into the omnipotent powers of the Lord . It also shows His powers and attributes do not vary with the avatara or form but are always fully potent.

The Lord's entry to the kingdom of Mithila and His stringing the bow left with Janaka by Shiva has also many leelas associated with it. These are recalled by the words, 'jaNakarAyana kuvariyamte". What is special about this address for Sita devi ? It tells the bhakta that Sita was the daughter of Janaka who ruled the Kingdom which was on the banks of the Ganges. Dasaru is saying that "None other than You O Ranganatha is qualified to be the groom of Janaki. So hurry and come with me, let's go....."

The rishi jaHnu did strict penance to have the Ganga flowing in the Himalayas. So Ganga is also known as JAhnavi at the place, the daughter of rishi jaHnu. From this one understands the Lord's magnanimity in bestowing praise/position on his devotees even though they rightfully belong only to Him. In this particular instance, we are aware from the Trivikrama avatara in Bhagavatham about the brith of Ganga which is the water that Brahma used to wash the holy feet of Lord Trivikrama. But inspite of this , Ganga is also well known as JAhnavi.

This is just one instance of His magnanimity, if one looks around , it is there everywhere . He grants the prestige of position to people even though the originator of the power which moves them to the position is Himself being the instigator of all actions and thoughts.

(To be continued)

Author : **Smt. Parimala Raghavendra**
Singapore
ravipariol@yahoo.com



**ಪುರಂದರದಾಸರು ಹೇಳಿದ ಕಥೆಗಳು**

# ಭಾಗೀರಥಿ ಭಗೀರಥನಿಗೆ ಒಲಿದದ್ದು

## ಭಗೀರಥಗೆ ಶ್ರೀ ಗಂಗೆ ಬಂದಂತೆ॥

ಈ ಉಗಾಭೋಗದಲ್ಲಿ ಭಗೀರಥನು ತನ್ನ ಪಿತೃಗಳನ್ನು ಗಂಗೆಯಿಂದ ಪಾವನಗೊಳಿಸಿದ ಭಾಗವತದ ಕಥೆಯನ್ನು ಶ್ರೀಪುರಂದರದಾಸರು ನಿರೂಪಿಸುತ್ತಾರೆ.

**ಸಗರನ** 60000 ಪುತ್ರರಿಗೆ ಸದ್ಗತಿಯನ್ನು ನೀಡಬೇಕೆಂದು ಅಪೇಕ್ಷಿಸಿ **ಅಂಶುಮಾರನು** ತಪಸ್ಸನ್ನು ಮಾಡುತ್ತಾನೆ. ಅವನಿಗೆ ಈ ಕಾರ್ಯವು ಸಾಧ್ಯವಾಗದೇ ಹೋಗಲು ಅವನ ಮಗನಾದ **ದೀಲಿಪನು** ಮತ್ತೊಮ್ಮೆ ಪ್ರಯತ್ನ ಮಾಡುತ್ತಾನೆ. ಇಬ್ಬರಿಗೂ ತಮ್ಮ ಪಿತೃಗಳನ್ನು ಉದ್ಧಾರ ಮಾಡುವ ಮಾರ್ಗವು ಸುಸೂತ್ರವಾಗುವುದಿಲ್ಲ. ಕೊನೆಗೆ ದಿಲೀಪನ ಮಗನಾದ **ಭಗೀರಥನು** ತನ್ನ ಪಿತೃಪಿತಾಮಹರು ಮಾಡಿದ ಪ್ರಯತ್ನವನ್ನು ಮುಂದುವರೆಸುತ್ತಾನೆ. ಚತುರ್ಮುಖ ಬ್ರಹ್ಮದೇವರ ಕಮಂಡಲುವಿನಲ್ಲಿ ಅಡಗಿದ ಗಂಗೆಯನ್ನು ಪರಿಪರಿಯಾಗಿ ಬಹುಕಾಲ ಸ್ತುತಿಸಿ ತಪಸ್ಸನ್ನು ಆಚರಿಸುತ್ತಾನೆ.

ಭಗೀರಥನ ತಪಸ್ಸಿಗೆ ಗಂಗೆಯು ದರ್ಶನವಿತ್ತು ಈ ರೀತಿ ಹೇಳುತ್ತಾಳೆ. ಆಕಾಶದಿಂದ ಜಿಗಿಯುವ ನನ್ನ ರಭಸವನ್ನು ತಡೆಯಬಲ್ಲವರಾರು? ನನ್ನ ರಭಸವನ್ನು ತಡೆಯದಿದ್ದಲ್ಲಿ ಭೂಮಿಯನ್ನು ಸೀಳಿ ಪಾತಾಳ ಸೇರಬೇಕಾಗುತ್ತದೆ. ಮತ್ತೆ ನನ್ನಲ್ಲಿ ಪಾಪಿಗಳು ಮಿಂದು ಅವರ ಪಾಪಗಳನ್ನು ನನಗೆ ಅಂಟಿಸುತ್ತಾರೆ. ಅವುಗಳನ್ನು ಪರಿಹಾರ ಮಾಡಿಕೊಳ್ಳುವ ಮಾರ್ಗವನ್ನು ತಿಳಿಸು ಎಂದು ಹೇಳುತ್ತಾಳೆ.

ಭಗೀರಥನು ಉತ್ತರವಾಗಿ **ತಾಯಿ, ಗಂಗೇ,** ಭೂಲೋಕದಲ್ಲಿ ಸದಾ ಹರಿಯ ಸ್ಮರಣೆಯನ್ನು ತಮ್ಮ ಹೃದಯ ಕಮಲದಲ್ಲಿ ಮಾಡುವ ಮಹಾತ್ಮರು ಬಹಳ ಇದ್ದಾರೆ. ಇದರಿಂದ ನಿನ್ನ ಪಾಪಪರಿಹಾರಕ್ಕೆ ಮಾರ್ಗವನ್ನು ಚಿಂತಿಸಬೇಕಾಗಿಲ್ಲ ಎಂದು ತಿಳಿಸುತ್ತಾನೆ. ಈ ರೀತಿಯಾಗಿ ತಿಳಿಸಿದ್ದರಿಂದ ಗಂಗೆಯು ಸಂತುಷ್ಟಳಾಗಿ ಭೂಮಿಗೆ ಹರಿಯುತ್ತಾಳೆ.

**ಶ್ರೀ ಶ್ರೀವಿಜ್ಞಾನನಿಧಿತೀರ್ಥರು**

**ಪುರಂದರದಾಸರು ಹೇಳಿದ ಕಥೆಗಳು**

## ಗಂಗೆ ಜಾಹ್ನವಿಯಾದದ್ದು

**ಭಾಗೀರಥಿಯನೀಂಟಿದರುಂಟೆ।।**

ಜಹ್ನು ಋಷಿಯು ಭಾಗೀರಥಿಯ ಪ್ರವಾಹವನ್ನು ನಿಲ್ಲಿಸಿದ ವೃತ್ತಾಂತವನ್ನು ರಾಮಾಯಾಣದ ಬಾಲಕಂಡ, ಭಾರತದ ಶಾಂತಿಪರ್ವ ಮತ್ತು ಭಾಗವತಾದಿಗಳಲ್ಲಿ ತಿಳಿಸಿರುವ ಕಥೆಯನ್ನು ದಾಸರು ಸ್ಮರಿಸುತ್ತಾರೆ.

ಚಂದ್ರವಂಶದ **ಸುಹೋತ್ರ** ರಾಜನ ಮಗನಾದ **ಅಜಾಮಿಢ, ಕೇಶಿನಿ** ಎಂಬುವರಲ್ಲಿ ಜಹ್ನು ಋಷಿಯು ಜನಿಸುತ್ತಾನೆ. ಈತನು ಕುಶಿಕನ ವಂಶಕ್ಕೆ ಮೂಲ ಪುರುಷ. ಈತನ ಆಶ್ರಮವು ಹಿಮಾಲಯದ ತಪ್ಪಲಿನಲ್ಲಿರುತ್ತದೆ.

ಭಗೀರಥನ ಪ್ರಾರ್ಥನೆಯನ್ನು ಮನ್ನಿಸಿ ಗಂಗೆಯು ಅವನ ಹಿಂದೆ ಬರುತ್ತಾಳೆ. ಹಿಂದೆಯೇ ಬರುತ್ತಿದ್ದ ಗಂಗೆಯು ಜಹ್ನು ಋಷಿಯ ಯಜ್ಞಶಾಲೆಯನ್ನು ಕೊಚ್ಚಿಕೊಂಡು ಹೋಗುತ್ತಾಳೆ. ಕುಪಿತನಾದ ಜಹ್ನು ಋಷಿಯು ಗಂಗೆಯನ್ನು ಆಪೋಶನ ತೆಗೆದುಕೊಳ್ಳುತ್ತಾನೆ.

ಭಗೀರಥನು ಮತ್ತೊಮ್ಮೆ (ಜಹ್ನು) ಋಷಿಯನ್ನು ಪ್ರಾರ್ಥಿಸುತ್ತಾನೆ. ಜಹ್ನು ಋಷಿಯು ಭಗೀರಥನಿಗೆ ಒಂದು ಸವಾಲನ್ನು ಹಾಕುತ್ತಾನೆ.

ಗಂಗೆಯು ಜಹ್ನುಋಷಿಯ ಮಗಳೆಂದು ಒಪ್ಪಿದರೆ ಮಾತ್ರ ಗಂಗೆಯನ್ನು ಹೊರಬಿಡುವೆನೆಂದು ತಿಳಿಸುತ್ತಾನೆ.

ಋಷಿಯ ಇಚ್ಛೆಯಂತೆ ಭಾಗಿರಥಿಯು ಜಹ್ನುವಿನ ಮಗಳೆಂದು ಒಪ್ಪಿ ಕೊಳ್ಳುತ್ತಾಳೆ. ಜಹ್ನುಋಷಿಯ ಕಿವಿಯಿಂದ ಭಾಗೀರಥಿಯು ಹೊರಬರುತ್ತಾಳೆ. ಅಲ್ಲಿಂದ ಹರಿದ ಭಾಗೀರಥಿಯನ್ನು **ಜಾಹ್ನವಿ** ಎಂದು ಕರೆಯುತ್ತಾರೆ.

**ಶ್ರೀ ಶ್ರೀವಿಜ್ಞಾನನಿಧಿತೀರ್ಥರು**



**ಪುರಂದರದಾಸರ**

**ಉಗಾಭೋಗ ಅಧ್ಯಯನ**

## ಶ್ರೀ ಪುರಂದರದಾಸರ ಉಗಾಭೋಗಗಳ ವೈಶಿಷ್ಟ್ಯ

ಹಾಲು ಕರೆದು ಹಾಗೇ ಯಾರೂ ಉಪಯೋಗಿಸರು, ಸ್ವಲ್ಪ ಕಾಯಿಸಿದಾಗ ರುಚಿಗೆ ತಕ್ಕಂತೆ ಆಗುವ ಸ್ವಾದ ಬೇರೆ. ಇನ್ನೂ ಹೆಚ್ಚು ಕಾಯಿಸಿ ಆರಿಸಿ ಹೆಪ್ಪು ಹಾಕಿದಾಗ ಕೆನೆಯು ಗೋಚರಿಸಿದ, ಆ ರುಚಿಯೇ ಬೇರೆ, ಈ ಕೆನೆ ಸಹಿತ ಹಾಲಿನ ಮಧುರತೆ ಇನ್ನೂ ಮುಂದೆ ಹಾಗೇ ಅದೇ ಹಾಲನ್ನ ಶಾಖದ ಮೇಲೆ ಕಾಯಿಸುತ್ತ ಹೋದಹಾಗೆಲ್ಲ ಅದೇ ಪಾತ್ರೆಯ ಅದೇ ಹಾಲು ಉಕ್ಕುವದನ್ನು ನೋಡುತ್ತೇವೆ. ಆ ಕ್ಷಣ ಉಕ್ಕಿದಾಗ ಹಾಲು ಮೊದಲಿಗಿಂತ ಜಾಸ್ತಿ ಆಗಿದ್ದು ಪಾತ್ರೆಯನ್ನು ನೋಡಿದಾಗ ಅನ್ನಿಸುತ್ತದೆ. ಆದರೆ ಪುನಃ ಶಾಖ ಕಡಿಮೆ ಆದಾಗ ಪುನಃ ಹಾಲು ಪಾತ್ರೆಯಲ್ಲಿ ಕೆಳಗೆ ಇಳಿದು ಪ್ರಥಮವಾಗಿದ್ದ ಹಾಲಿಗಿಂತ ಕೊಂಚ ಕಡಿಮೆ ಎನ್ನಿಸುವದು. ಈಗ ಆದದ್ದು ಏನೂ ? ಹಾಲು ಉಕ್ಕಿದ್ದು ಶಾಖದಿಂದ ಹಾಗೆ ಶ್ರೀಹರಿಯಲ್ಲಿ ಮನುಷ್ಯನ ಭಕ್ತಿಯು ಹೆಚ್ಚು ಹೆಚ್ಚು ಆಗುತ್ತದೆ. ಪರಾಕಾಷ್ಠೆ ಮುಟ್ಟಿದಾಗ ತನ್ನ ಯೋಗ್ಯತೆಗೆ ಮೀರಿ ಭಕ್ತಿ ಮಾಡಿದಾಗ ಅಥವಾ ಭಕ್ತ ತನ್ನನ್ನು ಎಲ್ಲ ರೀತಿಯಿಂದ ಸಲುಹುವ ದೇವನಿಗೆ ನೇರವಾಗಿ ಆರೋಪಿಸಿ ಭಕ್ತಿಯ ಭರದಲ್ಲಿ ಅಂದ ನುಡಿಯೇ ಉಗಾಭೋಗ.

ಸುಳಾದಿಗಳ ಅರ್ಥವನ್ನು ಒಂದು ಉಗಾಭೋಗದಲ್ಲಿ ಹೇಳಿದ್ದಾರೆ ಅದು ಹೀಗಿದೆ. **ಹರಿ ಎಂಬೊದೇ ಲಗ್ನವು । ಹರಿ ಎಂಬೋದೆ ಚಂದ್ರಬಲವು । ಹರಿ ಎಂಬೋದೆ ವಿದ್ಯಾ ಬಲವು । ಹರಿ ಎಂಬೋದೆ ದ್ರವ್ಯ ಬಲವು । ಹರಿ ಲಕ್ಷ್ಮೀಪತಿ ಪುರಂದರವಿಠಲನ ಬಲವಯ್ಯ ಸಕಲ ಸುಜನರಿಗೂ** ಅಂದಿದ್ದಾರೆ. ಹೀಗೆ ಅನೇಕ ಉಗಾಭೋಗಗಲ್ಲಿ ಮಹಾತ್ಮರಾದ ಶ್ರೀನಾರದಾಂಶರು ಶ್ರೀವಾಯುದೇವರ ಅತ್ಯಂತ ಪ್ರೀತಿಪಾತ್ರರು ಆದ ದಾಸರು. ಪ್ರಾಸಾದಿಕ ಏನು ಎಂಬ ಉಕ್ಕಿದ ಹಾಲಿನೋಪಾದಿಯಲ್ಲಿರುವ ಉಗಾಭೋಗದಲ್ಲಿ ಸಮಸ್ತ ಶ್ರೀಹರಿಯ ವೇದೋಕ್ತ ಮಹಿಮೆಯನ್ನು ತಂದು ಕನ್ನಡದಲ್ಲಿ ಇರಿಸಿದ್ದಾರೆ.

ಅವರೇ ಧನ್ಯರು ಮಾನ್ಯರು. ಎಷ್ಟು ಹೇಳಲಿ, ಎಷ್ಟು ಬರೆಯಲಿ ಆ ಪೂತಾತ್ಮ ಶ್ರೀ ಪುರಂದರರ ಉಗಾಭೋಗದ ಮಹಿಮೆ.

**ಲೇಖಕಿ : ತ್ರಿವೇಣಿ ಬಾಯಿ ಎನ್.ಆಶ್ರೀತ,**
**ಸುಳಾದಿಕೇಂದ್ರ, ಮಾನ್ವಿ ರಾಯಚೂರು ಜಿಲ್ಲೆ**

**ಪುರಂದರದಾಸರ**

**ಉಗಾಭೋಗ ಅಧ್ಯಯನ**

## ಅಪಾಯ ಕೋಟಿಗಳಿಗೆಲ್ಲ ಉಪಾಯ ಒಂದೆ

ಆಧ್ಯಾತ್ಮಿಕ ಸಾಮಾಜಿಕ ಮೌಲ್ಯಗಳ ಚಿಂತನೆಯಿಂದ ಸಜ್ಜನರ ಉದ್ಧಾರಕ್ಕಾಗಿ ಜ್ಞಾನ ಭಕ್ತಿ ವೈರಾಗ್ಯಗಳನ್ನುತ್ತೇಜಿಸುತ್ತಾ ಭಗವನ್ನಾಮೋಚ್ಚರಣ ಮಾಡಿಸಲು ಅವತರಿಸಿದ ಮಹಾತ್ಮರು ನಾರದಾಂಶ ಸಂಭೂತರಾದ ಶ್ರೀಪುರಂದರದಾಸರು. ಅವರು ರಚಿಸಿರುವ ಉಗಾಭೋಗಗಳಲ್ಲಿ ಉತ್ತಮ ಸಾಹಿತ್ಯ ಲಕ್ಷಣಗಳನ್ನು ಹಾಗೂ ಹರಿನಾಮ ಸ್ಮರಣಕ್ಕೆ ಅವರು ನೀಡಿದ ಪ್ರಾಧಾನ್ಯತೆಯನ್ನು ನಾವು ಕಾಣಬಹುದು.

ಜೀವನದಲ್ಲಿ ಬರುವ ಕಷ್ಟನಷ್ಟಗಳಿಗೆ ನಿರುತ್ಸಾಹ ಪಡದೆ ಧೃಡಮನಸ್ಕರಾಗಿ ಎದುರಿಸಿ **ಈಸಬೇಕು, ಇದ್ದು ಜಯಿಸಬೇಕು** ಎಂದು ಪ್ರೋತ್ಸಾಹ ನೀಡುತ್ತ ಜೀವನದಲ್ಲಿ ನಡೆಯುವ ಆಗುಹೋಗಗಳನ್ನು ವಿವರಿಸಿದ್ದಾರೆ.

ಇಂದಿಗೆಂಬಾ ಚಿಂತೆ, ನಾಳೆಗೆಂಬಾ ಚಿಂತೆ, ನಾಡಿದಿಗೆಂಬಾ ಚಿಂತೆ ಎಂದು ಮಾಡುವವನಿಗೆ ಮತ್ತು **ಮನೆಯೆಂಬಾಸೆಯು ಎನ್ನಮುಂದು ಗೆಡಿಸುತಿದೆ ಮನೆವಾರ್ತೆಯು ಎನ್ನ ಭಂಗ ಪಡಿಸುತಿದೆ** ಎಂಬ ಸಂಸಾರ ತಾಪತ್ರಯಗಳಲ್ಲಿ ಸಿಲುಕಿದ ಜೀವನಿಗೆ, ಹಾಗೂ ಗಾಣದೆತ್ತಿನಂತೆ ತಿರುಗಾಡಲಾರೆ ಎಂದು ಅರ್ಥ ವಿಹೀನದ ಪ್ರದಕ್ಷಿಣೆಗಳನ್ನು ಮಾಡುವವನಿಗೆ ಪರಮಾತ್ಮನು ಒಲಿಯನೆಂದು ವರ್ಣಿಸಿರುತ್ತಾರೆ.

**ಉಪಾಯೇ ನ ಹಿತ ಶಖ್ಯಂ**
**ನತ ಶಖ್ಯಂ ಪರಾಕ್ರಮೇ ಹೇಃ**

ಎಂಬಂತೆ ಕೊನೆಗೆ ಎಲ್ಲ ತಾಪತ್ರಯಗಳಿಗೆ ಒಂದೆ ಉಪಾಯವೆಂದು ತಿಳಿಸಿದ್ದಾರೆ. ಅದು ಹೀಗಿದೆ.

**ಅಪಾಯ ಕೋಟಿ ಕೋಟಿಗಳಿಗೆಲ್ಲ**
**ಉಪಾಯ ಒಂದೆ ಹರಿದಾಸರು**
**ತೋರಿಕೊಟ್ಟ ಉಪಾಯ ಒಂದೇ**
**ಪುರಂದರವಿಠಲಾ ಎಂದು ಭೋರಿಟ್ಟು**
**ಕೂಗೆ ಕರೆವ ಉಪಾಯ ಒಂದೇ ।**

**ಲೇಖಕ: ಶ್ರೀ ರುಕ್ಮೀಣೀಶವಿಠಲದಾಸರು (ಡಾ ॥ ಕೆ.ಆರ್. ರಾವ್),**
**ಹನುಮದ್ವಿಲಾಸ, ತಪೋವನ, ಅನಂತಪುರಂ.**



**ಪುರಂದರದಾಸರು**
**ಹೇಳಿದ ಕಥೆಗಳು**

## ಕೇಶಿ ಸಂಹಾರ

### ಬಾಹು ಕೇಶಿಯನೆತ್ತಿ ಕೆಡಹಿ ಬೀಸಾಡಿತು

ಪರಮಾತ್ಮನ ಕೃಷ್ಣಾವತಾರದ ಲೀಲೆಗಳನ್ನು ಈ ಉಗಾಭೋಗದಲ್ಲಿ ದಾಸರು ಸ್ಮರಿಸುತ್ತಾರೆ.

ಪ್ರಸ್ತುತ ಈ ಸಾಲಿನಲ್ಲಿ **ಕೇಶಿಯ** ವೃತ್ತಾಂತವನ್ನು ಒಂದೇ ಸಾಲಿನಲ್ಲಿ ನೀಡಿದ್ದಾರೆ.

ಕೇಶಿಯು ಹಿಂದಿನ ಜನ್ಮದಲ್ಲಿ ಇಂದ್ರ ದೇವರ ಅಶ್ವಸೇವಕನಾಗಿದ್ದನು. ಇವನ ಹೆಸರು ಕುಮುದ. ಒಮ್ಮೆ ಇಂದ್ರ ದೇವರು ಇಲ್ಲದಿದ್ದಾಗ ತಾನು ಕುದುರೆಯನ್ನೇರಿ ಕುಳಿತನು. ಇದನ್ನು ತಿಳಿದ ಇಂದ್ರದೇವರು ಅಸುರನಿಗೆ ಅಶ್ವನಾಗಿ ಜನ್ಮಪಡೆಯೆಂದು ಶಪಿಸಿದರು. ದೇವತೆಗಳಿಗೆ ಅಪಾರ ಶಕ್ತಿ ಇರುತ್ತದೆ. ಅಸುರನಾದ್ದರಿಂದ ಅವನಲ್ಲಿ ಹೆಚ್ಚು ಬಲವು ಸೇರಿಕೊಂಡಿತ್ತು.

ನಾರದರು ಇವನನ್ನು ಉದ್ಧರಿಸಲು ಕಂಸನಲ್ಲಿಗೆ ಬಂದು ಕೃಷ್ಣನ ಸಂಹಾರಕ್ಕೆ ಕೇಶಿಯನ್ನು ಕಳುಹಿಸೆಂದು ತಿಳಿಸಿದರು.

ಕೇಶಿಯು ತನ್ನ ಬಾಯನ್ನು ತೆರೆದು ಕೃಷ್ಣನನ್ನು ನುಂಗಲು ಬಂದಾಗ ಕೃಷ್ಣನು ತನ್ನ ಕೈಯನ್ನು ಅವನ ಬಾಯಲ್ಲಿ ತೂರಿ ಪ್ರಾಣವನ್ನೇ ತೆಗೆದನು.

ಈ ಕೇಶಿಯ ಪ್ರಾಣಹರಣ ಪ್ರಸಂಗವನ್ನು **ರುಕ್ಮೀಣೀಶ ವಿಜಯದಲ್ಲಿ** ಶ್ರೀವಾದಿರಾಜರು ಬಲು ಚಮತ್ಕಾರದಿಂದ ವರ್ಣಿಸಿದ್ದಾರೆ.

**ಶ್ರೀ ಶ್ರೀಕೇಶವನಿಧಿತೀರ್ಥರು**

**ಪುರಂದರದಾಸರು ಹೇಳಿದ ಕಥೆಗಳು**

## ಬಕವಧೆ

**ಬಕವಿದಾರಣ ನವೋ ನವೋ।**

ದಶಮ ಸ್ಕಂಧ ಭಾಗವತದ **ಬಕನ** ಸಂಹಾರದ ಕಥೆಯನ್ನು ಈ ಸಾಲುಗಳಲ್ಲಿ ವಿವರಿಸುತ್ತಾರೆ.

ಕೃಷ್ಣನ ಮಹಿಮಾ ವಿಶೇಷವನ್ನು ತಿಳಿಸುವ ಈ ಕೃತಿಯು ಪುರಂದರದಾಸರಿಂದ ರಚಿಸಲ್ಪಟ್ಟಿತು.

ಬಕನು ಕಂಸನ ಪರಿವಾರದ ಒಬ್ಬ ರಾಕ್ಷಸ. ಕಂಸನ ಮೂಲ ಉದ್ದೇಶ ಕೃಷ್ಣನ ಸಂಹಾರವಾಗಿರುತ್ತದೆ. ಈ ಉದ್ದೇಶವನ್ನು ಪೂರೈಸಲು ಕಂಸನು ಎಲ್ಲಾ ಉಪಾಯಗಳನ್ನು ಮಾಡುತ್ತಾನೆ. ತನ್ನ ಪರಿವಾರದವರೆಲ್ಲರನ್ನು ಒಬ್ಬೊಬ್ಬರನ್ನಾಗಿ ಕೃಷ್ಣನ ಸಂಹಾರಕ್ಕಾಗಿ ಕಳುಹುತ್ತಾನೆ. ಬಕನ ಸರದಿ ಬಂದಾಗ ಅವನಿಗೆ ಬಕಪಕ್ಷಿರೂಪವನ್ನು ಧರಿಸಿ ಕೃಷ್ಣನನ್ನು ಸಂಹಾರಮಾಡೆಂದು ತಿಳಿಸುತ್ತಾನೆ.

ಬಲರಾಮ-ಕೃಷ್ಣರು ಗೋಕುಲದಲ್ಲಿ ಗೋಪ-ಬಾಲಕರೊಂದಿಗೆ ಹಸು-ಕರುವನ್ನು ಮೇಯಿಸುತ್ತಿರುತ್ತಾರೆ. ಬಕರೂಪದಿಂದ ಕೃಷ್ಣನನ್ನು ನುಂಗುತ್ತಾನೆ. ತನ್ನ ದವಡೆಗಳಿಂದ ಅಗಿದು ನೆಲಕ್ಕೆ ಉಗುಳುತ್ತಾನೆ. ಕೃಷ್ಣನಿಗೆ ಸ್ವಲ್ಪವೂ ಗಾಯವಾಗುವುದಿಲ್ಲ, ಇದನ್ನು ಕಂಡು ಬಕನು ಕೋಪಾವಿಷ್ಟನಾಗುತ್ತಾನೆ. ತನ್ನ ಕೊಕ್ಕಿನಿಂದ ಕಚ್ಚಲು ಹೋಗುತ್ತಾನೆ. ಕೃಷ್ಣನು ಬಕಪಕ್ಷಿಯ ಕೊಕ್ಕರೆಯನ್ನು ಸೀಳಿ ಕೊಲ್ಲುತ್ತಾನೆ.

ಈ ರೀತಿ ಕಂಸನ ಉದ್ದೇಶವು ವ್ಯರ್ಥವಾಗುತ್ತದೆ ಮತ್ತು ಕೃಷ್ಣನ ಮಹಿಮೆಯನ್ನು ದಾಸರು ಈ ರೀತಿ ವರ್ಣಿಸುತ್ತಾರೆ.

**ಶ್ರೀ ಶ್ರೀಕೇಶವನಿಧಿತೀರ್ಥರು**



**ಪುರಂದರದಾಸರ ಉಗಾಭೋಗ ಅಧ್ಯಯನ**

## ಉಗಾಭೋಗಗಳಲ್ಲಿ ಮಿಂಚಿದ ದಾಸರ ಹರಿಭಕ್ತಿ

ಕುಮಾರವ್ಯಾಸನು ( ಗದುಗಿನ ನಾರಣಪ್ಪ ) ಕನ್ನಡ ಭಾರತವನ್ನು ರಚಿಸಿ, ಪುರಂದರದಾಸರ ಬಳಿಗೆ ವಿಮರ್ಶೆಗಾಗಿ ತಂದಾಗ ದಾಸರು ತಮ್ಮ ಒಂದು ಉಗಾಭೋಗದಲ್ಲಿ ಶ್ರೀ ಹರಿಯ ಮೇಲಿನ ತಮ್ಮ ಅನನ್ಯ ಭಕ್ತಿ ತೋರಿದ್ದು ಹೀಗೆ - ಭಾರತ ಮಲ್ಲ ಭೀಮನಲ್ಲ, ಭಾರತಮಲ್ಲ ಪಾರ್ಥನೆಂಬರು ಪಾರ್ಥನಲ್ಲ, ಭಾರತ ಮಲ್ಲ ಕರ್ಣನೆಂಬರು ಕರ್ಣನಲ್ಲ, ಭಾರತ ಮಲ್ಲ ಇವರಾರೂ ಅಲ್ಲ **ಗದುಗಿನ ವೀರ ನಾರಾಯಣಸ್ವಾಮಿ ಪುರಂದರವಿಠಲ** ತಾ ಬಲ್ಲ.

ಹರಿಸರ್ವೋತ್ತಮ ತತ್ವವನ್ನು ಸಾರುವ ದಾಸರ ಕೆಲ ಉಗಾಭೋಗ ನೋಡಿ : - **ನಿನ್ನ ಪಾಡುವೆ ನಿನ್ನನೇ ಪೊಗಳುವೆ, ನಿನ್ನನೇ ಬೇಡಿ ಬೇಸರಿಸುವೆ ॥ ನಿನ್ನ ಕಾಲನು ಹಿಡಿಯುವೆ ನಿನ್ನ ಹಾರೈಸುವೆ । ನಿನ್ನ ತೊಂಡರಿಗೆ ಕೈಕೊಡುವೆ ॥ ನಿನ್ನಂತೆ ಸಾಕಬಲ್ಲ ದೇವರಿನ್ನುಂಟೆ । ಘನ್ನ ಪುರಂದರವಿಠಲ ದೇವರ ದೇವ ॥**

ಎಂಥ ಕಷ್ಟಗಳು, ಕ್ಲೇಶಗಳು, ಆಪತ್ತುಗಳು ಬಂದೊದಗಿದರೂ ಧೃತಿಗೆಡದೆ ಪೂರ್ಣ ವಿಶ್ವಾಸ - ಶ್ರದ್ಧೆಯಿಂದ ಹರಿಯನ್ನು ನಂಬಿ ಆತನ ಚರಣಾರವಿಂದಗಳಿಗೆ ಸಂಪೂರ್ಣ ಶರಣಾದವರಿಗೆ ದಾಸರು ತಮ್ಮ ಉಗಾಭೋಗಗಳಲ್ಲಿ ಧೈರ್ಯ ಹೇಳಿ ಅಭಯ ತೋರಿದ್ದು ಹೀಗೆ - **ಕೆಟ್ಟೆನೆಂದೆಲೇಕೋ ಕ್ಲೇಶ ಪಡಲೇಕೋ ಗೇಣು । ಹೊಟ್ಟೆಗಾಗಿ ಪರರ ಕಷ್ಟ ಬಡಿಸಲೇಕೋ ।**

ಸಂಸಾರ ತಾಪತ್ರಯದಿ ನೊಂದು ನಿರಾಶರಾದವರಿಗೆ ದಾಸರು ಕಠಿಣವಾದ ಭವ ತೊರೆಯಲ್ಲಿ ಕಲ್ಲಿನಂತಿರಬೇಕು. ಹಾಗಿದ್ದರೆ ಸಂಸಾರವೆಂಬಂಥ ಭಾಗ್ಯವಿರಲಿ ಕಂಸಾರಿ ನೆನೆವಂಥ ಸೌಭಾಗ್ಯವಿರಲಿ, ಎನ್ನಿಸಿತು! ಎನ್ನುತ್ತಾರೆ. **ತಾಸು ಬಾರಿಸುತಿದೆ ಕೇಳಿ ಹರಿದಾಸರೆಲ್ಲ ಶ್ರೀಶನ ಭಜನೆಯ ಮಾಡದ ಮನುಜನ ಆಯುಷ್ಯ ವೃಥಾ ಹೋಯಿತು** ಪುರಂದರದಾಸರ ಉಗಾಭೋಗ ಹಾಗೂ ಇತರ ಕೃತಿಗಳಲ್ಲಿ ದಾಸರ ಹರಿಭಕ್ತಿ ಪರಮಾನಂದ ಹಂತ ಹಂತವಾಗಿ ಉಕ್ಕಿ, ತುಂಬಿ ತುಳುಕುವುದನ್ನು ಕೇಳಿದೊಡನೆಯೇ ಮೈ ಪುಳಕವಾಗುವುದು. ಯುಗಯುಗಗಳಿಂದ ಗಾಡ ಗೂಢವಾಗಿದ್ದ ಸಂಸ್ಕೃತದ ಮಹಾಮಂತ್ರಗಳು, ವೇದೋಪನಿಷತ್ತುಗಳು ಸಾಮಾನ್ಯ ಜನರಿಗೂ ಅರ್ಥವಾಗುವ ತಿಳಿ ಕನ್ನಡದಲ್ಲಿ ಕೀರ್ತನೆಗಳ ಮೂಲಕ ಪ್ರಚಾರ ಪಡಿಸಿದ ಹರಿದಾಸ ಸಾಹಿತ್ಯ ಸಾರ್ವಭೌಮ, ಕರ್ನಾಟಕ ಸಂಗೀತ ಪಿತಾಮಹನ, ಅಡಿದಾವರೆಗಳಿಗೆ ಕೋಟಿ ಕೋಟಿ ನಮನಗಳು.

**ಲೇಖಕಿ: ಶ್ರೀಮತಿ. ವಾಸಂತಿ.ಎಸ್.ರಾವ್.**
**938, ಆಶೀರ್ವಾದ, 7ನೇ ಬ್ಲಾಕ್, ಕಾಳಿದಾಸನಗರ, ಹೊಸಕೆರೆಹಳ್ಳಿ, ಬೆಂಗಳೂರು - 560085**

ಪುರಂದರದಾಸರ

ಉಗಾಭೋಗ ಅಧ್ಯಯನ

## ಭಗವಂತನ ಹಂಬಲ ಮೂಡಿಸುವ ಉಗಾಭೋಗ

ಪುರಂದರದಾಸರ ಉಗಾಭೋಗಗಳಲ್ಲಿರುವ ವಿಶೇಷತೆ ಎಂದರೆ, ಅವರ ಶ್ರದ್ಧೆ ಜೀವನಾನುಭವ, ದೈವಭಕ್ತಿ, ಲೋಕಚಿಂತನೆ ಎಲ್ಲವೂ ಮಿಳಿತವಾಗಿ ಸಾರವನ್ನಿಳಿಸಿ, ಜನಸಾಮಾನ್ಯರಿಗೆ ಮಾರ್ಗದರ್ಶನ ಮಾಡುವಂತಿವೆ.

ಲೌಕಿಕಗಣ್ಯ ಮಹದೈಶ್ವರ್ಯವನ್ನೂ ಸಂಪೂರ್ಣವಾಗಿ ತ್ಯಜಿಸಿ ತಂಬೂರಿ-ತಾಳಹಿಡಿದರೂ ತಾವು ಸಿರಿವಂತರೆಂದೇ ಹೇಳಿಕೊಂಡರು.

**ದರಿದ್ರರೆನ್ನಬಹುದೇ ಹರಿದಾಸರ**
**ಸಿರಿವಂತರೆನ್ನ ಬಹುದೇ ಹರಿದ್ರೋಹಿಗಳ**
**ಹರಿದಾಸರ ಮೇಲಿದ್ದ ಕರುಣವು**
**ಸಿರಿದೇವಿ ಮೇಲಿಲ್ಲವೋ**
**ಪುರಂದರವಿಠಲನ ಆಳುಗಳಿಗೆ**
**ಎಲ್ಲಿಹುದೋ ಮಾನಾಭಿಮಾನ ಜಗದಿ॥**

ಹರಿದಾಸನಾದೆನೆಂದೂ ವೈರಾಗ್ಯವಂತನೆಂದೂ ಸಮಾಜವನ್ನಾಗಲೀ, ಸಂಸಾರವನ್ನಾಗಲೀ ತ್ಯಜಿಸಲಿಲ್ಲ. ಶ್ರೀಹರಿಯೇ ದೊಡ್ಡ ಸಂಸಾರಿಯೆಂದು ಮನಗಂಡರು.

**ನಿತ್ಯ ಪತಿಭಾವ ಶ್ರೀಲಕ್ಷ್ಮೀದೇವಿಗಯ್ಯ**
**ನಿತ್ಯ ಪುತ್ರಭಾವ ಬೊಮ್ಮ ಪ್ರಾಣರಿಗೆ**
**ನಿತ್ಯಪೌತ್ರಭಾವ ಗರುಡ ಶೇಷರುದ್ರರಿಗೆ**
**ನಿತ್ಯಭೃತ್ಯಭಾವ ಇಂದ್ರಕಾಮ ಆತ್ಮಜೀವರಿಗೆ**
**ಇಂತೊರೆದ ಶ್ರೀಪುರಂದರವಿಠಲ॥**

ಸರ್ವಸ್ವವೂ ಭಗವಂತನದು, ನಮ್ಮ ನೋವು, ನಲಿವು ಸಂಕಟವೆಲ್ಲವೂ ಅವನಿಗೇ ಸೇರಿದ್ದು.

**ಮಾತಾಪಿತರು ನಿನಗಂದೆ ಮಾರಿದರೆನ್ನ**
**ನಾಥನೆ ನೀ ನನ್ನ ಸಲಹದಿದ್ದರೆ ದೇವ**
**ಯಾತಕೆ ಭಕ್ತವತ್ಸಲನೆಂದೆನಿಸಿಕೊಂಡೆ**
**ನಾ ತಡೆಯನೋ ನಿನ್ನ ಬಿರುದಿಗಂಜುವನಲ್ಲ**
**ಸಾತ್ವಿಕ ದೈವವೇ ಸಲಹೆನ್ನ ಪ್ರ**
**ಖ್ಯಾತ ಪುರುಷ ಶ್ರೀಪುರಂದರವಿಠಲ॥**

**ಲೇಖಕ: ಶ್ರೀನಾಥ್ ಕೊನೇಟಿ**
**ನಂ. 149/ವೈ, ಮೊದಲಮಹಡಿ, 50ನೇ ಅಡ್ಡರಸ್ತೆ, 3ನೇ ವಿಭಾಗ, ಬೆಂಗಳೂರು-10**



ಪುರಂದರದಾಸರ

ಉಗಾಭೋಗ ಅಧ್ಯಯನ

## ಹರಿದಾಸರ ಉಗಾಭೋಗಗಳು

ಉಗಾಭೋಗ ಎಂಬ ಪದ ಪ್ರಾಚೀನವಾಗಿದ್ದರೂ, ಉಗಾಭೋಗಗಳ ಸಂಖ್ಯೆ ಗಣನೀಯಪ್ರಮಾಣದಲ್ಲಿದ್ದರೂ, ಅದರ ಸ್ವರೂಪದ ಬಗ್ಗೆ ಮಾತ್ರ ಇನ್ನೂ ಸ್ಪಷ್ಟ ಚಿತ್ರ ಸಿಕ್ಕಿಲ್ಲ ತಂಜಾವೂರಿನ ದೊರೆ ತುಳಜಾಜಿಯ ಸಂಗೀತಸಾರಾಮೃತ, ಎಟ್ಟಿಯಾಪುರದ ಸುಬ್ಬರಾಮದೀಕ್ಷಿತರ ಸಂಗೀತಸಂಪ್ರದಾಯ ಪ್ರದರ್ಶಿನೀ ಮೊದಲಾದ ಪ್ರಸಿದ್ಧ ಲಕ್ಷಣಗ್ರಂಥಗಳಲ್ಲಿ ಇದರ ಉಲ್ಲೇಖ ಬರದಿರುವುದು ಈ ಜಿಜ್ಞಾಸೆಯನ್ನು ಮತ್ತಷ್ಟು ಹೆಚ್ಚಿಸಿದೆ. ಉಗಾಭೋಗ ಎಂಬ ಪದದ ಅರ್ಥದ ಬಗ್ಗೆ ವಿಪುಲಚರ್ಚೆ ನಡೆದಿದೆ. ಕೆಲವರು ಇದು ಉದ್ಗ್ರಾಹಾಭೋಗ ಎಂಬ ಸಂಸ್ಕೃತಶಬ್ದದ ಕನ್ನಡ ರೂಪ ಎಂದು ಭಾವಿಸಿದರು.

**ಉದ್ಗ್ರಾಹಃ ಪ್ರಥಮೋ ಭಾಗಃ ತತೋ ಮೇಲಾಪಕಃ ಸ್ಮೃತಃ।**
**ದ್ರುವತ್ವಾಚ್ಚ ಧ್ರುವಃ ಪಶ್ಚಾದಾಭೋಗಸ್ತ್ವಂತಿಮೋ ಮತಃ।**
**ಧ್ರುವಾಭೋಗಾಂತರೇ ಜಾತೋ ಧಾತುರನ್ಯೋಽಂತರಾಭಿಧಃ॥**
**-(ಗೋವಿಂದದೀಕ್ಷಿತನ ಸಂಗೀತಸುಧಾನಿಧಿ)**

ಎಂದರೆ ಉದ್ಗ್ರಾಹ, ಮೇಲಾಪಕ, ಧ್ರುವ ಹಾಗೂ ಆಭೋಗ ಎಂಬ ನಾಲ್ಕು ಅಂಗಗಳಿಂದ ಕೂಡಿದ ಸ್ವರಪ್ರಧಾನವಾದ ಗೀತವೇ ಉದ್ಗ್ರಾಹಾಭೋಗ. ಇದರಲ್ಲಿ ಮೊದಲನೆಯದು ಉದ್ಗ್ರಾಹವಾದರೆ, ಕೊನೆಯದು ಆಭೋಗ. ಈ ಆದ್ಯಂತಗಳಿಂದಾಗಿ ಇದಕ್ಕೆ ಆ ಹೆಸರು ಬಂದಿರಬೇಕು. ಮತ್ತೆ ಕೆಲವರು ಉಕ್ಥ ಎಂಬ ವೈದಿಕಪದದಲ್ಲಿ ಇದರ ಮೂಲವನ್ನು ಕಂಡರೆ, ಇನ್ನೂ ಕೆಲವರು ಉಗು ಎಂಬ ಕನ್ನಡ ಮಾತಿನಲ್ಲಿ ಇದರ ಉಗಮವನ್ನು ಕಾಣಲು ಯತ್ನಿಸಿರುವರು. ಹಲವರು ಶಿವಶರಣರ ವಚನಗಳಲ್ಲಿ ಇದರ ಮೂಲವನ್ನು ಗುರುತಿಸಲು ಪ್ರಯತ್ನಿಸಿದರೂ, ಇವು ಸ್ವರಪ್ರಧಾನವಾದ ಗೇಯರಚನೆಗಳಾಗಿದ್ದು, ಅವುಗಳಿಂದ ಭಿನ್ನವೆಂಬುದು ನಿಶ್ಚಿತ ಎಂದು ಒಪ್ಪಿರುವರು, ಮರಾಠಿಯ ಅಭಂಗಗಳು, ಓವಿಗಳು, ಸಂಸ್ಕೃತದ ಆರ್ಯಾಗಳು ದಂಡಿಗಳು ಉಗಾಭೋಗಕ್ಕೆ ಸ್ಫೂರ್ತಿಯಾಗಿರಬಹುದು ಎಂಬ ಊಹೆ ಮತ್ತೆ ಕೆಲವರದು. ಇವೆಲ್ಲವಕ್ಕೂ ಮೂಲವಾದ ಮತ್ತೊಂದು ಪ್ರಕಾರ ಇದ್ದಿರಬೇಕು ಎಂಬುದಾಗಿ ಹೆಚ್ಚಿನವರ ಅಭಿಮತ.

ಹೀಗೆ ಉಗಾಭೋಗ ಶಬ್ದದ ಅರ್ಥ ಹಾಗೂ ಲಕ್ಷಣಗಳು ಇನ್ನೂ ತೊಡಕಾಗಿಯೇ ಉಳಿದಿದ್ದರೂ, ಇದು ಸ್ವರಪ್ರಧಾನವಾದ ಗೇಯರಚನೆ ಎಂಬುದು ಮಾತ್ರ ಸರ್ವಸಮ್ಮತ.

**ಪುರಂದರದಾಸರ**

**ಉಗಾಭೋಗ ಅಧ್ಯಯನ**

ಹರಿದಾಸರ ಕೀರ್ತನೆಗಳಿಗೆ ಮುಖ್ಯಸ್ಫೂರ್ತಿಯನ್ನು ಋಗ್ವೇದದ ಸೂಕ್ತಗಳಲ್ಲಿ ಕಾಣಬಹುದು. ಅವರ ಗೇಯತೆಯ ಮೂಲ ಸಾಮವೇದದ್ದು. ಅದರಂತೆ ಉಗಾಭೋಗಗಳು ಸಂಸ್ಕೃತದ ಮುಕ್ತಕಗಳನ್ನು ಅದರಲ್ಲೂ ಆರ್ಯಾವೃತ್ತವನ್ನು ವಿಶೇಷವಾಗಿ ಹೋಲುತ್ತದೆ ಎಂಬುದು ಗಮನಾರ್ಹ.

ಉಗಾಭೋಗಗಳು ರಚನೆಯ ದೃಷ್ಟಿಯಲ್ಲಿ ಸುಳಾದಿಗಳಿಗೆ ಹತ್ತಿರವಾಗಿದ್ದು, ಕೆಲವು ಕಡೆ ಸುಳಾದಿಯ ಭಾಗವಾಗಿಯೇ ಮುದ್ರಿತವಾಗಿವೆ. ಇದರಿಂದ ಒಂದು ಹಂತದಲ್ಲಿ ಅವೆರಡಕ್ಕೂ ಇರುವ ಸಾಮ್ಯ ಸ್ಫುಟಪಡುತ್ತದೆ. ಶ್ರೀಪ್ರಸನ್ನವೇಂಕಟದಾಸರ ನವವಿಧ ಭಕ್ತಿಪ್ರತಿಪಾದಕ ಉಗಾಭೋಗಗಳು ಭಕ್ತಿಸುಳಾದಿ ಎಂಬ ಹೆಸರಿನಲ್ಲಿ ಮುದ್ರಿತವಾಗಿರುವುದು ಇದಕ್ಕೆ ಮತ್ತೊಂದು ನಿದರ್ಶನ. ಸುಳಾದಿಯ ಸ್ಫೂರ್ತಿಯಿಂದ ಉಗಾಭೋಗಪ್ರಾಕಾರವು ಜನ್ಮತಾಳಿರುವ ಸಾಧ್ಯತೆಯನ್ನು ಇದರಿಂದ ಊಹಿಸಬಹುದಾಗಿದೆ.

ಇಂದು ದೊರಕಿರುವ ಉಗಾಭೋಗಗಳಲ್ಲಿ ಖಚಿತವಾಗಿ ಹೇಳಬರುವಂತೆ ಶ್ರೀ ಶ್ರೀಪಾದರಾಜರ ರಚನೆಗಳೇ ಅತ್ಯಂತಪ್ರಾಚೀನ. ಅನಂತರ ಶ್ರೀವ್ಯಾಸರಾಜರು ಹಾಗೂ ಶ್ರೀವಾದಿರಾಜರು ಅನೇಕ ಉಗಾಭೋಗಗಳನ್ನು ರಚಿಸಿದರು. ಆದರೆ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಕೀರ್ತನಪ್ರಾಕಾರಕ್ಕೆ ಕೊಡುಗೆಯಿತ್ತಿರುವ ಶ್ರೀಪುರಂದರದಾಸರೇ ಉಗಾಭೋಗಗಳನ್ನೂ ವಿಪುಲಸಂಖ್ಯೆಯಲ್ಲಿ ನೀಡಿರುವ ಹರಿದಾಸರು. ಇಂದು ಉಪಲಬ್ಧವಿರುವ ಉಗಾಭೋಗಗಳಲ್ಲಿ ಹೆಚ್ಚಿನ ರಚನೆಗಳು ಶ್ರೀಪುರಂದರದಾಸರವೇ ಆಗಿವೆ ಎಂಬುದು ಗಮನಾರ್ಹ, ಅನಂತರದ ಸ್ಥಾನ ಶ್ರೀವಿಜಯದಾಸರದು.

ಉಗಾಭೋಗಗಳ ವ್ಯಾಪ್ತಿ ಎರಡು ಸಾಲುಗಳಿಂದ ಹಿಡಿದು ಹತ್ತಾರು ಸಾಲುಗಳವರೆಗೆ ಹರಡಿದೆ. ಎರಡು ಸಾಲುಗಳ ಅನೇಕ ಉಗಾಭೋಗಗಳನ್ನು ಶ್ರೀಪುರಂದರದಾಸರು ರಚಿಸಿರುವರು. ಅತಿ ಚಿಕ್ಕ ಉಗಾಭೋಗಗಳನ್ನು ರಚಿಸಿರುವ ಕೀರ್ತಿ ಇಂದೂ ಅವರದೇ ವಿಷಯವೈಪುಲ್ಯದ ದೃಷ್ಟಿಯಿಂದಲೂ ಅವರ ಉಗಾಭೋಗಕ್ಕೇ ಅಗ್ರಸ್ಥಾನ ಆದರೆ ಹೆಚ್ಚಿನ ಸಂಖ್ಯೆಯ ಉಗಾಭೋಗಗಳು ನಾಲ್ಕು, ಎಂಟು, ಹತ್ತು, ಹನ್ನೆರಡು ಸಾಲುಗಳಲ್ಲಿ ಕಂಡುಬರುತ್ತವೆ. ಇಪ್ಪತ್ತಾರು ಸಾಲುಗಳ **ನೀರೊಳಗೆ ನಿಂತು ನಿಡುಗುಪ್ಪು ನಾರುವಗೆ ಗಂಧಕಸ್ತೂರಿಲೇಪನದ ಮದವೋ** ಎಂಬ ಶ್ರೀಗೋಪಾಲದಾಸರ ಉಗಾಭೋಗವೇ ಇಂದು ಉಪಲಬ್ಧವಿರುವ ಉಗಾಭೋಗಗಳಲ್ಲಿ ಅತ್ಯಂತದೊಡ್ಡದು.

**ಗ್ರಂಥ ಋಣ: ಶ್ರೀ ಹರಿದಾಸರ ಉಗಾಭೋಗಗಳು**
**ಲೇಖಕ: ಡಾ॥ ವ್ಯಾಸನಕೆರೆ ಪ್ರಭಂಜನಾಚಾರ್ಯ**
**ಶ್ರೀವ್ಯಾಸಮಧ್ವಸೇವಾ ಪ್ರತಿಷ್ಠಾನ ಪ್ರಕಾಶನ ವಿಭಾಗ, ಹನುಮಂತನಗರ, ಬೆಂಗಳೂರು-19**



**ಪುರಂದರದಾಸರ**

**ಉಗಾಭೋಗ ಅಧ್ಯಯನ**

## ಲಿಂಗದೇಹ ಭಂಗವಾಗಲೆಂದು ದಾಸರಿತ್ತ ಉಗಾಭೋಗ

ಉಗಾಭೋಗಗಳ ರಚನೆಯಲ್ಲಿ ಅತಿ ಹೆಚ್ಚಿನ ಪಾಲು ಶ್ರೀಪುರಂದರದಾಸರದ್ದಾಗಿದೆ. ಉಗಾಭೋಗಗಳು ಅರ್ಥಗರ್ಭಿತ ತತ್ವಗಳನ್ನೊಳಗೊಂಡಿದೆ. ಶ್ರೀ ಪುರಂದರದಾಸರು **ಜೀವನದಲ್ಲಿ ಕಂಸಾರಿನೆನೆವಂಥ ಸೌಭಾಗ್ಯವಿರಲಿ** ಎಂಬುದು ಹರಿಯ ನಾಮಸ್ಮರಣೆಯ ಸಂಪೂರ್ಣ ಸಾಹಿತ್ಯವೇ ಇದಾಗಿದೆ. ಹರಿಯ ನಾಮಸ್ಮರಣೆ ಎಂಬುದು ನವವಿಧಭಕ್ತಿಯಲ್ಲಿ ಒಂದಾಗಿದೆ.

ಉಗಾಭೋಗ ಎಂಬುದು ಉದ್ಗ್ರಾಹ ಅಭೋಗಗಳ ಸಹ ಸ್ಪಂದನವೆಂದು ಅಭಿಪ್ರಾಯ ಉಂಟು ಉಗಾಭೋಗಗಳು ನೇರ, ಸರಳ ಸಹಜವಾದ ಒಂದಕ್ಕೊಂದು ಅರಳಿಕೊಳ್ಳುವ ಪದ ಜೋಡಣೆ. ಪುರಂದರದಾಸರ ಉಗಾಭೋಗಗಳು ಬಿಂದುವಿನಲ್ಲಿ ಸಿಂಧುವನ್ನು ನೋಡಿಸುವಷ್ಟು ಸಮರ್ಥವಾಗಿದೆ. ಅವರ ಉಗಾಭೋಗಗಳ ವೈಶಿಷ್ಟ್ಯವೆಂದರೆ ಸಂಕ್ಷಿಪ್ತವಾಗಿದ್ದರೂ ಸಮಗ್ರವಾದ ಅರ್ಥವನ್ನು ಕೊಡುವಲ್ಲಿ ಸಶಕ್ತವಾಗಿದೆ.

**ಬಲಿಯ ಮನೆಗೆ ವಾಮನ ಬಂದಂತೆ**
**ಭಗೀರಥನಿಗೆ ಶ್ರೀಗಂಗೆ ಬಂದಂತೆ**
**ಮುಚುಕುಂದಗೆ ಮುಕುಂದ ಬಂದಂತೆ ವಿದುರನ**
**ಮನೆಗೆ ಶ್ರೀಕೃಷ್ಣಬಂದಂತೆ ನಿನ್ನ ನಾಮವು ಬಂದು ಎನ್ನ ನಾಲಿಗೆಯಲಿ**
**ನಿಂದು ಸಲಹಲಿ ಪುರಂದರವಿಠಲ**

ಹರಿದಾಸ ಸಾಹಿತ್ಯಕ್ಕೆ ವೈವಿಧ್ಯತೆ ಹಾಗೂ ವೈಶಿಷ್ಟ್ಯವನ್ನು ಒದಗಿಸುವಲ್ಲಿ ಉಗಾಭೋಗಗಳ ಪಾತ್ರವು ಹಿರಿದಾಗಿದೆ. ಉಗಾಭೋಗವು ದಾಸರ ಮೂಲಕ ಹೊರಹೊಮ್ಮಿತು. ಈ ಉಗಾಭೋಗವು ಧಾರ್ಮಿಕ ಆಚಾರ, ಆಧ್ಯಾತ್ಮಿಕ ತತ್ವ ದೈವಸ್ತುತಿಗಳಂತೆ ವೈವಿಧ್ಯಪೂರ್ಣ ವಿಷಯಗಳ ನಿರೂಪಣೆ ಇದರಲ್ಲಿ ಸಿಗುತ್ತದೆ.

ಉಗಾಭೋಗವು ಸ್ವರ ಪ್ರಧಾನಗೀತೆ. ಈ ಉಗಾಭೋಗದಲ್ಲಿ ರಾಗವಿರುತ್ತದೆ. ತಾಳ ನಿರ್ಭಂದವಿರುವುದಿಲ್ಲ. ಪ್ರಾಸವು ಬೇಕಿಲ್ಲ. ಇದು ಸರಳವಾಗಿಯೂ ಆಧ್ಯಾತ್ಮಿಕವಾಗಿಯೂ ಅನುಭವವಾಗುವದು. ತತ್ವವಾಗಬಹುದು. ಲೋಕನೀತಿಯಾಗಬಹುದು.

**ಲೇಖಕಿ: ಶ್ರೀಮತಿ ಜಯಶ್ರೀಗುತ್ತಲ**
**13 ನರಸಿಂಹಕೃಪಾ, ಕೇಶವನಗರ, ಸ್ಟೇಟ್‌ಬ್ಯಾಂಕ್‌ಕಾಲನಿ, ಧಾರವಾಡ-580007**

**ಪುರಂದರದಾಸರ**

**ಉಗಾಭೋಗ ಅಧ್ಯಯನ**

# ಉಗಾಭೋಗಗಳ ಬಗ್ಗೆ ಕೆಲವು ಅನಿಸಿಕೆಗಳು

ವ್ಯಾಸಕೂಟ, ದಾಸಕೂಟ ಇವೆರಡಕ್ಕೂ ಜಗದ್ಗುರು ಮಧ್ವಾಚಾರ್ಯರ, ತತ್ವವಾದವೇ ಮೂಲ. ದಾಸಕೂಟದವರು ತತ್ರಾಪಿ ಪುರಂದರದಾಸರು ವೇದಾಂತ ಹಾಗೂ ಸಾಮಾನ್ಯ ಜನಜೀವನವನ್ನು ಅತಿ ಸಮೀಪ ತಂದಿದ್ದಾರೆ. ಸರ್ವೋತ್ತಮತ್ವ, ತಾರತಮ್ಯ, ಪಂಚಭೇದ, ಜಗತ್ ಸತ್ಯತ್ವಗಳಂಥ ಕೇವಲ ಜಿಜ್ಞಾಸುಪ್ರಾಯವಾದ ನೀರಸವೆನಿಸುವಂತಹ ತತ್ವಗಳನ್ನು ಸುಂದರ ಸುಲಭಗ್ರಾಹ್ಯವಾಗುವ ಆಡುಭಾಷೆಯಲ್ಲಿ ಕಾವ್ಯಮಯವಾಗಿ ವಿವರಿಸಿದ್ದಾರೆ. ಗ್ರಾಮ್ಯ ಜಾನಪಧಿಯನ್ನು ನೋಡಿದಾರೆ ಪುರಂದರದಾಸರು ಜನಸಾಮಾನ್ಯರ ಸಾಮೀಪ್ಯದ ಸಂಗತಿ ಎಂದು ತೋರುತ್ತದೆ. ಶ್ರೀಪಾದರಾಜರು ತಿಳಿಸಿದ ಮಾರ್ಗದಲ್ಲಿಯೇ ಶ್ರೀವ್ಯಾಸರಾಜರು, ಶ್ರೀವಾದಿರಾಜರು, ಪುರಂದರದಾಸರು, ಕನಕದಾಸರು ಮುನ್ನಡೆಸಿದ್ದಾರೆ. ಪುರಂದರದಾಸರ ಸ್ವತಹಗುರುಗಳೇ **ದಾಸರೆಂದರೆ ಪುರಂದರದಾಸರಯ್ಯ** ಎಂಬ ಪದ್ಯದಲ್ಲಿ ಹೊಗಳಿದ್ದನ್ನು ಕೇಳಿ ಅಲ್ಲಿಯೇ ಇದ್ದ **ಗೋವಿಂದ ಭಿಕ್ಷು**ಗಳು ಇದೇನು ಎಂದು ಪ್ರಶ್ನಿಸಿದರು. ದಾಸರು ಈ ಜನ್ಮದಲ್ಲಿ ಶಿಷ್ಯರಿದ್ದರೂ ಹಿಂದಿನ ಜನ್ಮದಲ್ಲಿ ನಾರದರಾಗಿ ಪ್ರಹ್ಲಾದರಾಜರಿಗೆ ಸ್ವರೂಪೋದ್ಧಾರಕರೆಂದು ಸ್ಮರಿಸಿದ್ದಾರೆ.

**ಪುರಂದರ ಗುರುಂ ವಂದೇ ದಾಸಶ್ರೇಷ್ಠ. ದಯಾನಿಧಿಂ** ಎಂದು ಹೇಳುವದರಲ್ಲಿಯವುಗಳೇ ಇವರ ಪದ, ಪದ್ಯ, ಕೀರ್ತನೆ ಸುಳಾದಿ, ಉಗಾಭೋಗ, ದಂಡಕ ಇತ್ಯಾದಿಗಳಿಗೆ ಆಕರವೆನಿಸುತ್ತವೆ. ಪುರಂದರದಾಸರು ವಿರಕ್ತ ಸಂಸಾರಿಗಳು. ಗ್ರಹಸ್ಥಸನ್ಯಾಸಿಗಳು ಲೋಕವ್ಯವಹಾರದಲ್ಲಿ ಇದ್ದೂ ಇರದವರು. ಇದರಿಂದ ಹೊರಬಂದ ಉಗಾಭೋಗ ಮನದಾಳದಿಂದ ಮೂಡಿಬಂದವುಗಳು.

ಪುರಂದರದಾಸರು ಬೆಳಗಿನಿಂದ ಮಲಗುವವರೆಗೂ, ಸೃಷ್ಟಿಯಿಂದ ಲಯದವರೆಗೂ ಚಿಂತನ ಶಕ್ತಾಶಕ್ತರೆಲ್ಲರೂ ಸಾಧಿಸಬಹುದಾದ್ದನ್ನು ಮಧ್ವಸಿದ್ಧಾಂತರೀತ್ಯಾ ಸುಲಭಗ್ರಾಹ್ಯವಾಗುವಂತೆ ಪರಿಚಯಿಸಿದ್ದಾರೆ.

**ಲೇಖಕ: ಎಸ್.ಕೆ. ರೊಟ್ಟಿ**
**ನಂ. 84, ಶಿವಾನಂದನಗರ, ನವನಗರ ಅಂಚೆ, ಹುಬ್ಬಳ್ಳಿ-25.**



**ಪುರಂದರದಾಸರ**

**ಉಗಾಭೋಗ ಅಧ್ಯಯನ**

# ಉಗಾಭೋಗದಲ್ಲಿ ಸಖ್ಯ ಭಕ್ತಿಯ ಅಭಿವ್ಯಕ್ತಿ

ಹರಿದಾಸರು ಕನ್ನಡ ಸಾಹಿತ್ಯಕ್ಕೆ ನೀಡಿದ ವಿಶಿಷ್ಟ ಕಾಣಿಕೆ ಸುಳಾದಿ ಮತ್ತು ಉಗಾಭೋಗಗಳ ಪ್ರಕಾರಗಳು. ಈ ಎರಡೂ ಗೇಯಪ್ರಕಾರಗಳು ಶ್ರೀಪಾದರಾಜರಿಂದಲೇ ಉಗಮಗೊಂಡವು. ಶ್ರೀಪಾದರಾಜರು, ವ್ಯಾಸರಾಯರಿಗಿಂತ ಪುರಂದರದಾಸರ ಕೃತಿಗಳಲ್ಲಿಯೇ ಉಗಾಭೋಗಗಳು ಹೆಚ್ಚಿನ ಸಂಖ್ಯೆಯಲ್ಲಿ ರಚಿತವಾಗಿರುವುದು ಕಂಡು ಬರುತ್ತದೆ. ಸ್ವರಪ್ರಧಾನತೆ, ಸಂಕ್ಷಿಪ್ತ ಬಂಧ ತಾಳ-ಪ್ರಾಸಗಳ ಅನಿರ್ಬಂಧತೆ ಮುಂತಾದ ಲಕ್ಷಣಗಳನ್ನು ಉಗಾಭೋಗಗಳ ರಚನೆಯಲ್ಲಿ ಕಾಣಬಹುದಾಗಿದೆ. ಆಧ್ಯಾತ್ಮ, ತತ್ವ, ಸ್ವಾನುಭವ, ಸ್ತೋತ್ರ, ಬೋಧೆ ಮುಂತಾದ ವಿಷಯ ವೈವಿಧ್ಯತೆಯನ್ನು ಉಗಾಭೋಗಗಳಲ್ಲಿ ಕಾಣುತ್ತೇವೆ.

ಪುರಂದರದಾಸರು ರಚಿಸಿದ ಉಗಾಭೋಗಗಳು ಸುಮಾರು ನೂರಾ ಅರವತ್ತೊಂದರ ಸಂಖ್ಯೆಯಲ್ಲಿ ಉಪಲಬ್ಧವಿವೆ. ಸಾಧಕನ ಸಾಧನೆಗೆ ಇಂಬುಗೊಡುವ ಆಯಾಮಗಳ ಚಿಂತನೆ ಇಲ್ಲಿದೆ. ತಾತ್ವಿಕತೆ, ಸದಾಚಾರ, ದಾಸ್ಯಭಕ್ತಿ, ಸಂಸ್ಮರಣೆ, ಹರಿಯ ಅವತಾರಗಳು ಮುಕ್ತಿ, ಫಲಶ್ರುತಿ ಮುಂತಾದ ವಿಷಯ ನಿರೂಪಣೆಯನ್ನು ವಿಶಿಷ್ಟ ಭಾಷಾಶೈಲಿ, ದೃಷ್ಟಾಂತ, ಅನುಭವೋಕ್ತಿ. ಹೇಳಿಕೆಗಳೊಡನೆ, ಸರಳ, ನೇರವಾದ, ಹೃದ್ಯತೆ, ಶೈಲಿಯಲ್ಲಿ, ದಾಸರು ಚಿತ್ರಿಸಿದ್ದಾರೆ. ಪುರಂದರದಾಸರ ಸಖ್ಯಭಕ್ತಿಯಲ್ಲಿ ಮೂಡಿದ ಉಗಾಭೋಗವೊಂದು ಇಂತಿದೆ.

**ನಿನ್ನಂಥ ಸ್ವಾಮಿ ಎನಗುಂಟು ನಿನಗಿಲ್ಲ**
**ನಿನ್ನಂಥ ತಂದೆಯು ಎನಗುಂಟು ನಿನಗಿಲ್ಲ**
**ನಿನ್ನಂಥ ದೊರೆಯು ಎನಗುಂಟು ನಿನಗಿಲ್ಲ**
**ನೀನೆ ಪರದೇಶಿ ನಾನೆ ಸ್ವದೇಶಿ**
**ನಿನ್ನರಸಿ ಲಕುಮಿ ಎನ್ನತಾಯಿ**
**ನಿನ್ನ ತಾಯ ತೋರೋ ಪುರಂದರವಿಠಲ||**

ಆದಿ, ಅಂತ್ಯ ಪ್ರಾಸಗಳಿಂದ ಸಂಭಾಷಣೆಯ ರೂಪದಲ್ಲಿ ರಚಿತವಾದ ಈ ಉಗಾಭೋಗದಲ್ಲಿ ದಾಸರು ಈಶ ಮತ್ತು ಜೀವರ ಲಕ್ಷಣಗಳನ್ನು ಹುದುಗಿಸಿದ್ದಾರೆ. ಪರಮಾತ್ಮನನ್ನು ಸ್ವಾಮಿ, ತಂದೆ, ದೊರೆ, ನಾಥ ಎಂದು ಸಂಬೋಧಿಸಿದ್ದಾರೆ. ಸ್ವಾಮಿ-ಭೃತ್ಯಭಾವದ ಉಪಾಸನೆಯು ಹೇಳೋಹಾಗಿದೆ. ಪತಿಯೆಂಬ ಭಾವದಿಂದ ಲಕ್ಷ್ಮೀದೇವಿಯೂ, ಪಿತನೆಂಬ ಭಾವದಿಂದ ಬ್ರಹ್ಮ-ವಾಯುಗಳು, ತಾತನೆಂಬ ಭಾವದಿಂದ ಗರುಡ, ಶೇಷ, ರುದ್ರರು, ಇಂದ್ರ, ಕಾಮ ಮುಂತಾದ ದೇವತೆಗಳೆಲ್ಲ ಭೃತ್ಯಭಾವದಿಂದಲೂ ಹರಿಯ ಉಪಾಸನೆ ಗೈಯುವರೆಂಬ ತಾರತಮ್ಯ ಚಿಂತನೆ ನೀಡಿದ್ದಾರೆ.

**ಪುರಂದರದಾಸರ**

**ಉಗಾಭೋಗ ಅಧ್ಯಯನ**

ಇನ್ನುಳಿದ ಸಾಧಕ ವರ್ಗ ಪರಮಾತ್ಮನನ್ನು ಸಚ್ಚಿದಾನಂದಸ್ವರೂಪನೆಂದು ಉಪಾಸನೆ ಮಾಡಬೇಕೆಂಬ ವಿಷಯವನ್ನು ಅನ್ವಯಿಸಿಕೊಳ್ಳಬಹುದಾಗಿದೆ. ಶ್ರೀಹರಿಗೆ ಸಮರು, ಅಧಿಕರು ಯಾರೂ ಇಲ್ಲ. ಈತನೆ ಸರ್ವತಂತ್ರಸ್ವತಂತ್ರ, ಸರ್ವೋತ್ತಮ. ಎಲ್ಲವೂ ಶ್ರೀಹರಿಯ ಆಧೀನ. ಜಡ-ಚೇತನಕ್ಕೆಲ್ಲ ಈತನೆ ಸ್ವಾಮಿಯಾಗಿದ್ದಾನೆ.

ಬ್ರಹ್ಮಾಂಡವನ್ನೆ ಉದರದಲ್ಲಿ ಇಂಬಿಟ್ಟ ಶ್ರೀಹರಿ ತಂದೆಯೆನಿಸಿದ್ದಾನೆ. ಜೀವಿಗೆ ಎಂದೆಂದೂ ಅಗಲದ ಅನಿಮಿತ್ತ ಬಾಂಧವನಾಗಿ, ರಕ್ಷಕನಾಗಿಯೂ ತಂದೆಯೆನಿಸಿದ್ದಾನೆ. ಜೀವರಾಶಿಗಳು ಸೃಜ್ಯಾವಸ್ಥೆಗೆ ಬರುವಲ್ಲಿ ಜನನಿ, ಪಿತ, ಭೂಮಿ, ವಾರಿಜ, ಅಂಬರಗಳಲ್ಲಿ ಪರಮಾತ್ಮ ತನ್ನ ಮೂವತ್ತು ರೂಪಗಳಿಂದ ಸೃಷ್ಟಿಗೆ ಕಾರಣನಾಗಿ ತಂದೆಯೆನಿಸುತ್ತಾನೆ. ಆದರೆ ಪರಮಾತ್ಮ ಜನನ-ಮರಣವಿಲ್ಲದ, ತಂದೆತಾಯಿಗಳಿಲ್ಲದವ ಅಜನು, ಅನಾದಿಯೆನಿಸಿದ್ದಾನೆ. ಜೀವನೂ ಅನಾದಿಯಾದರೂ ಶ್ರೀಹರಿಯ ಆಧೀನ ಕರ್ತೃತ್ವ, ಸ್ವಾತಂತ್ರ್ಯವುಳ್ಳವ. ಪರಮಾತ್ಮನ ಪ್ರೇರಣೆಯಿಂದಲೆ ಜೀವನ ವ್ಯಾಪಾರನಡೆಯುತ್ತದೆ. ಲೋಕದ ತಂದೆ ಅನ್ನ, ಬಟ್ಟೆ-ನೆರಳು ಕೊಟ್ಟರೆ, ಶ್ರೀಹರಿ ತನ್ನನ್ನು ಉಪಾಸಿಸುವವರಿಗೆ ತನ್ನ ಧಾಮಗಳನ್ನು ಕೊಟ್ಟು, ತನ್ನನ್ನು ಕೊಟ್ಟು ಉತ್ತಮಗತಿಯನ್ನೆ ಕೊಡುವ ತಂದೆಯಾಗಿದ್ದಾನೆ. ಆದರೆ ಜೀವಿಯು ತನ್ನ ಕರ್ಮಕ್ಕನುಗುಣವಾಗಿ, ಅನೇಕ ಯೋನಿಗಳನ್ನು ಹೊಂದುತ್ತಾ, ಒಂದೊಂದು ಭವದಲ್ಲಿಯೂ ಪ್ರತ್ಯೇಕ ತಂದೆ-ತಾಯಿಯರನ್ನು ಹೊಂದುತ್ತಾ ಸಾಗುತ್ತಾನೆ. ಈ ಅರ್ಥದಿಂದ, ಅನುಸಂಧಾನದಿಂದ ಪರಮಾತ್ಮನನ್ನು ಆರಾಧಿಸುವ ಭಾವ ಇಲ್ಲಿದೆ.

ಭಗವಂತ ಜೀವಿಗಳಿಗೆ ಪ್ರಭು, ಒಡೆಯ, ದೊರೆಯೆನಿಸಿದ್ದಾನೆ. ಭಗವಂತ ಆಳುವವ, ಜೀವಿಗಳು ಆಳಿಸಿಕೊಳ್ಳುವವರು. ತನ್ನ ಸೇವಕರು ಮಾಡುವ ಅಪರಾಧಕ್ಕೆ ದೊರೆ ಶಿಕ್ಷಿಸುವಂತೆ, ಜೀವಿಗಳೂ ತಮ್ಮ ತಪ್ಪಿಗೆ ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ. ಭಗವಂತನ ಆಜ್ಞೆಯಿಂದಲೇ ಕಾಲ, ಋತು, ದೇವತೆಗಳು, ಹಗಲು-ರಾತ್ರಿಗಳು ಜರುಗುತ್ತವೆ. ಸೂರ್ಯ, ಚಂದ್ರಾದಿಗಳು ಭಗವಂತನ ಕಟಾಜ್ಞೆಯಿಂದಲೇ ಚಲಿಸುವವರು. ಸಾಧಕರು ವಿಧಿನಿಷೇಧಗಳರಿತು ನಡೆಯಬೇಕಾಗುತ್ತದೆ.

ಪುರಂದರದಾಸರು ನವಿರಾದ ಹಾಸ್ಯದೊಡನೆ ಪರಮಾತ್ಮನನ್ನು ಪರದೇಶಿ ಎಂದು ಕರೆದರೂ ಆಂತರ್ಯದಲ್ಲಿ ಸರ್ವತ್ರವ್ಯಾಪ್ತ, ಸರ್ವಸ್ಥಿತ, ಆತನೇ ಕರ್ತಾ, ಭರ್ತಾ, ಇಂತಹ ಪರಮಾತ್ಮನಲ್ಲಿ ಶರಣು ಬರುವುದೇ ಸ್ವದೇಶಿಭಾವ. ಲೋಕದ ಬಂಧುತ್ವದ ಮೋಹಕ್ಕಿಂತ ಪರಮಾತ್ಮನು ತನ್ನ ಅಂತರಂಗದಲ್ಲಿದ್ದಾನೆ. ಆತನೆ ತನ್ನ ನಿಜವಾದ ಬಂಧು ಎಂಬ ಭಾವವನ್ನು ಸ್ವದೇಶಿ ಎಂದು ಹೇಳಿದ್ದಾರೆ. ಅಥವಾ ಸ್ವ ಎಂದಾಗ ತನ್ನ ದೇಹವೇ ಒಂದು ಕ್ಷೇತ್ರ ಈ ದೇಹದಲ್ಲಿ ದೇಶಿಯನಾಗಿ ಆಪ್ತನಾಗಿ ತನ್ನ ಕ್ಷೇತ್ರದ (ದೇಹದ) ಹೃದಯ ಪ್ರದೇಶದಲ್ಲಿ ಸ್ಥಿತನಾಗಿರುವವನೆಂಬ ಸಾಂಕೇತಿಕ ಭಾವವೂ ಇಲ್ಲಿದೆ.

**ಲೇಖಕಿ: ಡಾ|| ಶ್ರೀಮತಿ ಜಯಲಕ್ಷ್ಮೀ ಮಂಗಳಮೂರ್ತಿ**
**''ಭಾರತೀಶ'' ಲಕ್ಷ್ಮೀಪುರಂ ಬಡಾವಣೆ, ರಾಯಚೂರು.**



**ಪುರಂದರದಾಸರ**

**ಉಗಾಭೋಗ ಅಧ್ಯಯನ**

## ಭಗವನ್ನಾಮದ ಆಧಿಕ್ಯ ಸಾರುವ ತಂತ್ರ

ಹರಿದಾಸರಾದವರು **ದಾಸೋಹಂ** ಎಂಬ ಭಾವವನ್ನು ಕ್ಷಣಕಾಲವೂ ಮರೆಯುವವರಲ್ಲ. ನಯವೇ ಅವರ ಆಸ್ತಿ ಆಭರಣಗಳು.

**ಬಡವರೊಳಗೆ ಎನ್ನಿಂದ್ಯಾರು ಬಡವರಿಲ್ಲ**
**ಕೊಡುವರೊಳಗೆ ನಿನ್ನಿಂದ್ಯಾರು ಕೊಡುವರಿಲ್ಲ**
**ದೃಢಭಕ್ತಿ ನಿನ್ನಲ್ಲಿ ಎನಗೆ ಕಲ್ಪಿಸಿ**
**ಬಿಡದೆಸಲಹೊ ಶ್ರೀ ಪುರಂದರವಿಠಲ**

ಎಂಬಲ್ಲಿ ಹರಿದಾಸರೂ ಕೂಡ ತಮ್ಮ ಬಡತನವನ್ನು ಬಿನ್ನೈಸಿಕೊಂಡಿರುವುದನ್ನು ನೋಡಿದರೆ, ಆಶ್ಚರ್ಯವೆನಿಸಬಹುದು! ಈ ಬಡತನ ದುಡ್ಡು ಕಾಸುಗಳಿಗೆ ಅನ್ವಯಿಸುವ ಬಡತನವಲ್ಲ. ಹರಿದಾಸರಿಗೆ ಹರಿಕರುಣೆಯನ್ನು ಎಷ್ಟು ಪಡೆದರೂ ತೃಪ್ತಿಯಿಲ್ಲ. ಆ ದೃಷ್ಟಿಯಿಂದ ಅವರು ಸರ್ವದಾ ಬಡವರೇ ಸರಿ. ದೇವರಿಗಾದರೂ, ತನ್ನ ಹೆಂಡತಿಯ ಮೇಲೂ ಇಲ್ಲದಷ್ಟು ಭಕ್ತನಲ್ಲಿ ಅಭಿಮಾನ, ವಾತ್ಸಲ್ಯಗಳು, ಎಷ್ಟು ಕೊಟ್ಟರೂ ದಣಿವಿಲ್ಲ.

ಹರಿದಾಸರಿಗೂ ಹರಿಗೂ ಇರುವ ಈ ಪರಸ್ಪರ ಬಾಂಧವ್ಯದ ವೈಭವವನ್ನು ಕುರಿತು ಒಂದು ಬಾರಿ ದಾಸರು ತಮ್ಮ ಭುಜವನ್ನು ತಾವೇ ತಟ್ಟಿಕೊಂಡಿರುತ್ತಾರೆ.

ಇದು ಆತ್ಮಸ್ತುತಿಯಲ್ಲ;, ಅಹಂಕಾರ ಮೊದಲೇ ಇಲ್ಲ. ಹರಿಭಕ್ತನ ಕೃತಾರ್ಥತೆ ಮತ್ತು ಕೃತಜ್ಞತೆಯನ್ನು ಕುರಿತು ಹೇಳುವ ಈ ಉಗಾಭೋಗವು ಬಹಳ ಸ್ತೋತ್ರಾರ್ಹವಾಗಿದೆ. ಇದು ಹರಿಭಕ್ತನ ಮೇಲ್ಮೆಯನ್ನು ಸಾರುವುದಲ್ಲದೆ, ಶ್ರೀ ಹರಿಯು ಅದ್ವಿತೀಯ ಅನುಪಮೇಯ ಎಂಬ ದೃಷ್ಟಿಯೂ ಇಲ್ಲಿ ವ್ಯಕ್ತವಾಗುತ್ತದೆ.

**ಲೇಖಕ: ಜಿ.ಆರ್.ರಘುನಾಥರಾವ್**
**1003,ಗರ್ಗೇಶ್ವರಿ 27ಎ ಮುಖ್ಯರಸ್ತೆ, ಜಯನಗರ 9ನೇ ಬ್ಲಾಕ್, ಬೆಂಗಳೂರು-560069**
**ಲೇಖಕಿ: ಸುಶೀಲ ರಂಗನಾಥರಾವ್**
**ವಿಜಯ ನೆಸ್ಟ್, 7, ಫ್ಲಾಟ್ 1, 14ನೇ ಎ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-3**

## ಉಗಾಭೋಗ-ದಿವ್ಯತೆಯ ಸುಯೋಗ

**ಪ್ರಾತಃ ಕಾಲದ ನಿದ್ರೆ ಪರಿಹರಿಸಿ ಹರಿಯ ಸ್ಮರಿಸಿ**
**ನಾಥ ಗೋವಿಂದಗೆ ಪ್ರದಕ್ಷಿಣೆ ಪ್ರೀತಿಯೋಳ್॥**

ನಿದ್ರೆಯಿಂದ ಎದ್ದ ತಕ್ಷಣ ಹರಿಸ್ಮರಣೆ ಮಾಡುತ್ತ ಏಳಬೇಕು. ನಿತ್ಯಕರ್ಮಾನುಷ್ಠಾನವನ್ನು ಪೂರೈಸಿ ಅತಿಥಿ ಅಭ್ಯಾಗತರನ್ನು ಆದರಿಸಿ ಪುರಾಣಾದಿಗಳನ್ನು ಕೇಳುತ್ತ ಹರಿಸ್ಮರಣೆ ಮಾಡುತ್ತ ಆ ದಿನವನ್ನು ಪೂರೈಸಬೇಕೆಂದು ಪುರಂದರದಾಸರು ನಮಗೆ ತಿಳಿಸಿಕೊಡುತ್ತಾರೆ.

**ಆಕಳ ಕಿವಿಯಂತಿರಬೇಕು ಅಂಗೈಯ್ಯ ಹಳ್ಳ**
**ಉದ್ದು ಮುಳುಗೊ ಅಷ್ಟು ನೀರು,ಸಾಕಾಗದಲೆ**
**ಮತ್ತೆ ಬೇಕಂದಷ್ಟು ಕುಡಿದರೆ ಅದರ ಸಹಕಾರಿ**
**ಪುರಂದರವಿಠಲನು ತಾ ಮಧ್ಯಸಮ ಮಾಡಿಸುವ ॥**

ಆಚಮನ ಮಾಡುವ ರೀತಿಯನ್ನು ತಿಳಿಸುತ್ತಾರೆ. ಕೈಯನ್ನು ಆಕಳ ಕಿವಿಯಂತೆ ಹಳ್ಳಮಾಡಿ ಅದರಲ್ಲಿ ಸ್ವಲ್ಪವೇ ನೀರುಹಾಕಿಕೊಂಡು ಆಚಮನ ಮಾಡಬೇಕು. ಆಚಮನವೆಂದು ನೀರನ್ನು ಜಾಸ್ತಿ ಸೇವಿಸಬಾರದು ಎಂದರೆ ಅದು ಹೆಂಡಕ್ಕೆ ಸಮಾನ. ಕರ್ಮಗಳನ್ನು ತಿಳಿದು ಮಾಡು ಎನ್ನುತ್ತಾರೆ.

**ನವರತ್ನಗಳು ಕಂಡಕಂಡತಾವಿನಲ್ಲುಂಟೆ ।**
**ನವವಿಧಭಕುತಿಗಳು ಕಂಡಕಂಡಲ್ಲುಂಟೆ ।**
**ದೇವ ನಿನ್ನ ಭಕುತಿ ಕಂಡರೆ ಬಾರದು ಕಲಿತರೆ ಬಾರದು ।**
**ಪುರಂದರವಿಠಲ ನಿನ್ನದಯವಾಗದನಕ ॥**

ನವರತ್ನಗಳು ಕಂಡಕಂಡಲ್ಲಿ ಹೇಗೆ ದೊರೆಯುವದಿಲ್ಲವೋ ಸಮುದ್ರದಲ್ಲಿ ಮಾತ್ರ ಹೆಕ್ಕೆಕ್ಕಿ ತೆಗೆಯಬೇಕೋ ಅದರಂತೆ ಹರಿಭಜನೆಗೆ ನವವಿಧ ಭಕ್ತಿಯೊಂದೇ ಸಾಲದು ಹರಿಯ ಅನುಗ್ರಹವೂ ಬೇಕಾಗುತ್ತದೆ.

**ಲೇಖಕಿ: ಕುಮುದಾಬಾಯಿ**
**2359/3ಎ, 10ನೇ ಕ್ರಾಸ್, ಬಸವೇಶ್ವರ ರಸ್ತೆ, ಮೈಸೂರು-570004**





## ಪುರಂದರದಾಸರ ಉಗಾಭೋಗಗಳಲ್ಲಿ ಅನುಬೋಧೆ

ಏರಿಬರುವ ಭಾವದ ಅಲೆಗಳನ್ನು ತಾಳದ ಕಟ್ಟುನಿಟ್ಟಿಗೂ, ರಾಗ, ಛಂದಸ್ಸಿನ ಓಟಕ್ಕೂ ಸರಿಹೊಂದಿಸಬೇಕಾದ ಪ್ರಜ್ಞಾಪೂರ್ವಕ ಪ್ರಕ್ರಿಯೆ, ಕೀರ್ತನೆ ಸುಳಾದಿಗಳಂತೆ, ಉಗಾಭೋಗಗಳಲ್ಲಿ ಅನಿವಾರ್ಯವಾಗುವುದಿಲ್ಲ. ಶರಣರ ವಚನಗಳಂತೆ ಉಗಾಭೋಗಗಳಲ್ಲಿ ಮುಕ್ತ ಅಭಿವ್ಯಕ್ತಿಗೆ ಅವಕಾಶವಿರುತ್ತದೆ. ಅಂತೆಯೇ ಇಲ್ಲಿನ ಅಭಿವ್ಯಕ್ತಿ-ಅನುಬೋಧೆಗಳು ನೇರ, ನಿರ್ದಿಷ್ಟ ಹಾಗೂ ಕುರ್ತೇಟಾಗಿರುತ್ತದೆ. **ಗುರಿಯೆಚ್ಚವನೆ ಬಿಲ್ಲಾಳು; ಹರಿಯ ಭಜಿಸಲರಿಯದವನೆ ಮೂಸಾಳು** ಇದೊಂದು ಉಗಾಭೋಗ. ಮಿಂಚಿನಂತಹ ಮಾತು. ಮುಗಿದೇ ಹೋಯಿತು! ತರ್ಕವೂ ಇಲ್ಲ; ಜಿಜ್ಞಾಸೆಯೂ ಇಲ್ಲ!

ಅವಕಾಶವಾದಾಗಲೆಲ್ಲಾ ದಾಸರು ಈ ಪ್ರಕಾರವನ್ನು, ಲೋಕಶಿಕ್ಷಣಕ್ಕಾಗಿ, ಸಮಯಸ್ಫೂರ್ತಿಯಿಂದ, ಸಮರ್ಥವಾಗಿ ಬಳಸಿಕೊಂಡಿದ್ದಾರೆ. **ಮನಃ ಶುದ್ಧಿ ಇಲ್ಲದವಗೆ ಮಂತ್ರದ ಫಲವೇನು? ತನುಶುದಿಯಿದ್ದಿಲ್ಲದವಗೆ ತೀರ್ಥದ ಫಲವೇನು?** ಎಂದು ಕೇಳಿದಾಗ, ಮಂತ್ರ-ತಂತ್ರದ, ಹರಿಪಾದೋದಕ ತೀರ್ಥ-ಪ್ರಸಾದದ ಮಹತ್ವವನ್ನೇನೂ ಅವರು ಅಲ್ಲಗಳೆಯುವುದಿಲ್ಲ. ಆದರೆ ಅವುಗಳ ಪ್ರಯೋಜನವಾಗಬೇಕಾದರೆ ಸಾಧಕನಿಗೆ ಇರಬೇಕಾದ ಪೂರ್ವಸಿದ್ಧತೆಯ ಬಗ್ಗೆ ಮಾತ್ರ ಗಮನ ಸೆಳೆಯುವುದನ್ನು ಬಿಡುವುದಿಲ್ಲ. **ಮಿಂದಲ್ಲಿ ಫಲವೇನು ಮೀನು-ಮೊಸಳೆಗಳಂತೆ?,,,, ಹೊರಗೆ ಮಿಂದು ಒಳಗೆ ಮೀಯದವರ ಕಂಡು ಪುರಂದರವಿಠಲನೇ ನಸುನಕ್ಕುಬಿಡುತ್ತಾನಂತೆ!** ಇದಕ್ಕಿಂತಲೂ ಸ್ಪಷ್ಟೋಕ್ತಿ ಬೇರೊಂದು ಬೇಕೇ?

ಬೆಲ್ಲದ ಕಟ್ಟೆಯ ಕಟ್ಟಿ, ಬೇವಿನ ಬೀಜವ ಬಿತ್ತಿ, ಜೇನುಮಳೆಗರೆದರೆ ವಿಷ ಹೋಗುವುದೇನಯ್ಯ? ಏನು ಮಾಡಿದರೇನು? ಏನು ಕೇಳಿದರೇನು? ಮನದೊಳಗಣ ತಾಮಸ ಮಾಣದನ್ನಕ?... ಇದಕೇನು ಮದ್ದು ಶ್ರೀಪುರಂದರವಿಠಲಾ? ಉಗಾಭೋಗಗಳಲ್ಲಿನ ದೃಷ್ಟಾಂತಾಲಂಕಾರದ ವೈಭವ, ನೇರವಾಗಿ ವಚನ ಸಾಹಿತ್ಯವನ್ನು ನೆನಪಿಗೆ ತರುವಂಥದು.

**ಲೇಖಕ: ಆರ್. ಕೆ. ದಿವಾಕರ**
**ದಿವ್ಯವು 335, ಲಕ್ಷ್ಮೀಪುರ, ಬೆಂಗಳೂರು-560019**

ಪುರಂದರದಾಸರ

ಉಗಾಭೋಗ ಅಧ್ಯಯನ

# ಅಲ್ಲದ ಕರ್ಮವ ಆಚರಿಸಿದವ ಕೆಟ್ಟ

ಜನರ ಬಗ್ಗೆ ಅತೀವ ಕಾಳಜಿ ಇರುವ ಪುರಂದರದಾಸರು ಯಾರೊಬ್ಬರಿಂದಲೂ ಸಮಾಜ ಸ್ವಾಸ್ಥ್ಯ ಕೆಡಬಾರದೆಂದು ತಮ್ಮ ಹೆಚ್ಚಿನ ಸಂಖ್ಯೆಯ ಕೃತಿಗಳಲ್ಲಿ ವಿಶದಪಡಿಸಿದ್ದಾರೆ.

ತನಗೂ ಅಲ್ಲದೆ ಇತರರಿಗೂ ಉಪಯೋಗವಿಲ್ಲದ ಕೆಲಸ ಮಾಡುವವ, **ಅಲ್ಲದ ಕರ್ಮವ ಆಚರಿಸಿದವ ಕೆಟ್ಟ**. ಜನರಲ್ಲಿ ಕುಳಿತಾಗ ಹೆಚ್ಚಿನ ಜನರ ಅಭಿಪ್ರಾಯವನ್ನು ಅಲ್ಲಗಳೆಯುವವ **ಎಲ್ಲರೊಳಗೆ ವಿರೋಧಿಸುವವ ಕೆಟ್ಟ**. ಇಂದಿನ ರಾಜಕಾರಣಿಗಳಲ್ಲಿ ಇದನ್ನೇ ನೋಡುತ್ತಿದ್ದೇವೆ. ತರ್ಕಕ್ಕಾಗಿ ತರ್ಕ, ವಾದಕ್ಕಾಗಿ ವಿದ್ಯೆ ಎಂಬಂತೆ ಎಲ್ಲ ಜಾಣರ ವಿರೋಧ ಕಟ್ಟಿಕೊಳ್ಳದವ **ಬಲ್ಲವರೊಡನೆ ಸೆಣಸಾಡಿದವ ಕೆಟ್ಟ** ಧರ್ಮ ಪತ್ನಿಯಲ್ಲಿ ಕೇವಲ ಲಲ್ಲೆಹೊಡೆಯುವ, ಹೆಂಡತಿಯ ಮಾತುಗಳನ್ನು ನಂಬುವವ **ಲಲ್ಲೆ ಮಾತಿನ ಸತಿಯ ನಂಬಿದವ ಕೆಟ್ಟ** ಸಮಾಜದಲ್ಲಿ ಎಲ್ಲರ ದೃಷ್ಟಿಯಲ್ಲಿ ಅಧಃ ಪತನನಾಗುತ್ತಾನೆ.

ನೀತಿಮಾರ್ಗ ತೋರಿಸುತ್ತ ದಾಸರು ಕೊನೆಯಲ್ಲಿ ಭಕ್ತಿಯನ್ನು ಪ್ರಸ್ತಾಪಿಸುತ್ತ ಆ ಕಮಲನಾಭ ಪುರಂದರವಿಠಲನ ಪಾದ ಪಂಕಜಗಳನ್ನು ನಂಬದೆ ಕೇವಲ ದುಷ್ಟನಾಗಿಯೋ ಅಥವಾ ಡಂಭಾಚಾರಿಯಾಗಿಯೋ ಇದ್ದವನಿಗೆ ಇಹದಲ್ಲಿಯೂ ಮತ್ತು ಪರದಲ್ಲಿಯೂ ಶಾಂತಿ ಸಿಗದೆ ಯಶಸ್ಸುಸಿಗದೆ ಕೆಟ್ಟುಹೋಗುತ್ತಾನೆ. **ಪುಲ್ಲನಾಭ ಶ್ರೀಪುರಂದರ ವಿಠಲನ ಮೆಲ್ಲಡಿಯ ನಂಬದವ ಇಹಪರಕೆ ಕೆಟ್ಟ**

ಹೀಗೆ ಕಲಿಯುಗದಲ್ಲಿ ಏನೇನು ಮಾಡಿದರೆ ಕೆಟ್ಟು ಹೋಗುತ್ತಾನೆ ಎಂದು ವಿವರಿಸುತ್ತ ಅಂತಹವುಗಳನ್ನು ವರ್ಜಿಸಿ ಎನ್ನುತ್ತಾರೆ. **ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ** ಎನ್ನುವಂತೆ ದಾಸರು ಕೊನೆಯಲ್ಲಿ ಆ ಪರಮಾತ್ಮನ ಪಾದಕಮಲಗಳೇ ನಮಗೆ ಮೋಕ್ಷದಾಯಕ ಎಂದು ಅವನಲ್ಲಿ ಭಕ್ತಿ ಮಾಡುವದೇ ನಮ್ಮ ಕರ್ತವ್ಯ ಎಂದು ಈ ಉಗಾಭೋಗದಲ್ಲಿ ತಿಳಿಸಿದ್ದಾರೆ. ಮತ್ತು ಭಕ್ತಿ ಮಾರ್ಗ ತೋರಿಸುತ್ತ ನೀತಿಶಾಸ್ತ್ರವನ್ನು ಜನರಿಗೆ ಹೇಳಿದ್ದಾರೆ.

**ಲೇಖಕ: ಎಂ.ಜಿ. ದೇಶಪಾಂಡೆ**
**ಆನಂದ ಮೆಡಿಕಲ್ ಸೆಂಟರ್, ಸೇಡಮ್-585222.**



ಪುರಂದರದಾಸರ

ಉಗಾಭೋಗ ಅಧ್ಯಯನ

# ಚಿಕ್ಕ-ಚೊಕ್ಕಪದಯೋಗ

ಉಗಾಭೋಗವು ಹರಿದಾಸ ಸಾಹಿತ್ಯದಲ್ಲಿ ಶಿಷ್ಟವಾದ ಕೃತಿಯಾಗಿದೆ. ಸುಳಾದಿ ಕ್ಲಿಷ್ಟವಾದ ಕೃತಿಯಾದರೇ ಉಗಾಭೋಗ ತುಂಬ ಸರಳವಾದ ರಚನೆ. ಸಾಹಿತ್ಯದಲ್ಲಿ ಪಲ್ಲವಿ,ಅನುಪಲ್ಲವಿ, ಚರಣ ಮುಂತಾದ ಅಂಗಗಳಿಲ್ಲದೆ ರಾಗವು ನಿರ್ದಿಷ್ಟವಾಗಿರದೆ ತಾಳ ಕೇವಲ ಸರ್ವ ಲಘುವಿನಲ್ಲೇ ಇದ್ದು, ಭಕ್ತಿ ಪ್ರಧಾನವಾದ ಸಣ್ಣ ಕೃತಿ ಇದು.

ಉದ್ಗ್ರಾಹವೆಂದರೆ ಒಂದು ರಾಗವನ್ನು ಎತ್ತಿಕೊಳ್ಳುವುದು; ಮೇಳಾಪಕವೆಂದರೆ ಮೇಳದಲ್ಲಿ ಅದರ ನಿಲುಗಡೆ; ಧ್ರುವವೆಂದರೆ ರಾಗವನ್ನು ಹಮ್ಮೈಸುವುದು; ಅಭೋಗವೆಂದರೆ ರಾಗಶುದ್ಧವಾದ ಮತ್ತು ಸುಖವಾದ ಸ್ವರ ಸಂಚಾರ, ಉದ್ಗ್ರಾಹವೇ ಮೊದಲನೆಯದಾಗಿ ಅಭೋಗವೇ ಕೊನೆಯದಾಗಿ ಉಳ್ಳ ಸಂಗೀತ ಸಾಹಿತ್ಯದ ತುಣುಕಿಗೆ 'ಉದ್ಗ್ರಾಹಾಭೋಗ' ವೆಂದು ಪ್ರಾಚೀನರು ಅರ್ಥೈಸಿದ್ದಾರೆ, ಅದು ಈಗ 'ಉಗಾಭೋಗ' ವೆಂಬ ತದ್ಭವವಾಗಿ ಪರಿಣಮಿಸಿದೆ. ಪುರಂದರದಾಸರು ಈ ಒಂದು ಉಗಾಭೋಗದಲ್ಲಿ ಸ್ವಲ್ಪದರಲ್ಲಿ ಚಿಕ್ಕದಾಗಿ ಬಹು ಸುಂದರವಾಗಿ ವಿವರಿಸಿದ್ದಾರೆ. ಇದು ನೆನಪಿನಲ್ಲಿಡಲೂ ಕೂಡ ಬಹಳ ಅನಕೂಲವಾಗಿದೆ. ಅದು ಹೀಗಿದೆ.

**'ಹರಿಕಥಾಶ್ರವಣವು, ಹರಿನಾಮಕೀರ್ತನೆ, ಹರಿಸ್ಮರಣೆ,**
**ಹರಿಪಾದಸೇವನೆ, ಹರಿಪೂಜನೆ, ವಂದನೆ,ದಾಸ್ಯ,**
**ಸಖ್ಯತ್ವ,ಹರಿಗಾತ್ಮರ್ಪಣೆ ಮುಕ್ತಿಪಥ ತತ್ವ ಪುರಂದರವಿಠಲ ಪರಮಾತ್ಮ**
**ಸಿಧ್ಧ ಗುರುಮಧ್ವಮತ ಶ್ರುತಿ ಸ್ಮೃತಿಯೊಳು ಶುಧ್ಧ॥'**

ಭಕ್ತಿಯ ಪಥದಲ್ಲಿ ಶ್ರವಣವು ಮೊದಲ ಹೆಜ್ಜೆ. ಅದು ಬಹು ಮುಖ್ಯ. ಏಕೆಂದರೆ ಮನವು ಬಹು ಚಂಚಲ. ಈ ವಿಷಯಕ್ಕೆ ಅದು ಸಿಧ್ಧವಾಗುವುದು ಕಠಿಣ. ಶ್ರವಣದ ಅಭ್ಯಾಸ ಬಲಿತಂತೆ ಕೀರ್ತನೆ, ಸ್ಮರಣೆ, ಇತ್ಯಾದಿಗಳು. ಭಕ್ತಿಪಥದಲ್ಲಿ ಮುನ್ನಡೆಯಲು ಇಚ್ಛೆಯುಳ್ಳವರಿಗೆ ದಾಸರು ಮೇಲಿನ ಪದದಲ್ಲಿ ಮಾರ್ಗದರ್ಶನ ನೀಡಿದ್ದಾರೆ.

**''ನಿನಗೆ ಯಾರೂ ದಿಕ್ಕಿಲ್ಲ, ನೀನೇ ಎಲ್ಲರಿಗೂ ದಿಕ್ಕು, ನಿನಗೆ ಯಾರೂ ಸ್ವಾಮಿಯಿಲ್ಲ, ನೀನೇ ಎಲ್ಲರಿಗೆ ಸ್ವಾಮಿ. ನಿನಗೆ ಜನನ, ಮರಣ, ತಂದೆ ತಾಯಿಗಳಿಲ್ಲ,''** ಎಂದು ಹೇಳುತ್ತ'ಪರಮಾತ್ಮನೇ ಸರ್ವೋತ್ತಮನು' ಎಂಬುದನ್ನು ಮನಮುಟ್ಟುವಂತೆ ಹಾಸ್ಯರಸದೊಂದಿಗೆ ಉಣಬಡಿಸಿದ್ದಾರೆ.ಅದರ ಆಸ್ವಾದನೆಯನ್ನು ಮಾಡುವದು ರಸಿಕ ಹೃದಯರಿಗೆ ಸೇರಿದ್ದು. ಸಾಹಿತ್ಯದ ದೃಷ್ಟಿಯಿಂದ ಭಕ್ತಿಯಲ್ಲಿ ಸಂಚಾರಿಯಾಗಿ ಬಂದ ವಿನೋದದ ಒಂದು ಅತ್ಯುತ್ತಮ ಮಾದರಿ.

**ಲೇಖಕಿ: ಸೌ॥ ಶೋಭಾ ವ. ಕುಲಕರ್ಣಿ.**
**ಎ 104 ರಮಣಜ್ಯೋತಿ ಅಪಾರ್ಟಮೆಂಟ ಯಶವಂತಪುರ ಬೆಂಗಳೂರ-22.**

**ಪುರಂದರದಾಸರ**

**ಉಗಾಭೋಗ ಅಧ್ಯಯನ**

# ಜೀವನದ ಭಾಗ್ಯವಿದೆಂದು ಸಾರುವ ಉಗಾಭೋಗ

**ಅಣಕದಿಂದಾಗಲಿ ಡಂಭದಿಂದಾಗಲಿ। ಎದ್ದಾಡಾಗಲಿ। ಬಿದ್ದಾಡಾಗಲಿ।**
**ತಾಗಿದಾಡಾಗಲಿ। ತಾಕಿಲ್ಲದಾಡಾಗಲಿ। ಮರೆದು ಮತ್ತೊಮ್ಮೆಯಾಗಲಿ।**
**ಹರಿಹರಿಯೆಂದವನಿಗೆ। ನರಕದ ಭಯವೇಕೆ। ಯಮಪಟ್ಟಣಕಟ್ಟಿದ**
**ರೇನು। ಯಮ ಪಟ್ಟಣ ಬಟ್ಟ ಬಯಲಾದರೇನು। ಹರಿದಾಸರಿಗೆ**
**ಪುರಂದರವಿಠಲ।।**

ಪುರಂದರದಾಸರ ಒಂದೊಂದು ಪದವೂ ಉಗಾಭೋಗವು ಕೀರ್ತನೆಯು, ಸುಳಾದಿಯು, ಮುಂಡಿಗೆಯು, ಶ್ರೀಹರಿಯೇ ಸರ್ವೋತ್ತಮನೆಂದು ಸಾರಿಸಾರಿ ಹೇಳುತ್ತವೆ. ಅಂತಹ ಹರಿನಾಮಸ್ಮರಣೆಯನ್ನು ಹರಿದಾಸರು ಸದಾಕಾಲವೂ ಮಾಡುತ್ತಿದ್ದು ಅವರಿಗೆ ಯಮನ, ಯಮಪಟ್ಟಣದ, ಯಾವ ಭಯವೂ ಕಾಡುವುದಿಲ್ಲವೆಂಬ ತತ್ವವನ್ನು ಅರುಹಿದ್ದಾರೆ.

ಶ್ರೀಕೃಷ್ಣಾ, ಶ್ರೀಹರಿ ಎಂದು ನಾಮಸ್ಮರಣೆ ಮಾಡುವವರಿಗೆ, ನರಕದ ಭಯವು ಇರುವುದಿಲ್ಲ, ಅದರ ಬಗ್ಗೆ ಯೋಚನೆ ಮಾಡುವಷ್ಟು ಸಮಯ, ವ್ಯವಧಾನವಿರುವುದಿಲ್ಲ ಅವರು ಶ್ರೀಹರಿಯಧ್ಯಾನದಲ್ಲಿಯೇ ತಲ್ಲೀನರಾಗಿರುತ್ತಾರೆ, ಸದಾಕಾಲವೂ ಶ್ರೀಹರಿಯ ಧ್ಯಾನ ನಾಮಸ್ಮರಣೆಯಲ್ಲಿಯೇ ಮಗ್ನರಾಗಿರುವವರಿಗೆ ಅನ್ಯ ಚಿಂತೆಗಳು ಕಾಡುವುದಾದರೂ ಹೇಗೆಂದು ದಾಸರು ಪ್ರಶ್ನಿಸುತ್ತಾರೆ.

ಯಾವುದೇ ಕಾರಣದಿಂದಾಗಲೀ ಕಾರಣವಿಲ್ಲದೆಯೂ ಆಗಲೀ ಶ್ರೀಹರಿಯ ಸ್ಮರಣೆ ಮಾಡುವ ಭಕುತರಿಗೆ ಪ್ರಪಂಚದ ಯಾವ ಭಯವೂ ಇರಲಾರದೆಂದು ದಾಸರು ಖಚಿತವಾಗಿ ತಿಳಿಸುತ್ತಾರೆ. ಅಂದರೆ ಈ ಉಗಾಭೋಗದಲ್ಲಿ ಹರಿನಾಮ ಸ್ಮರಣೆಯ ಅದ್ಭುತ ಶಕ್ತಿಯನ್ನು ಸ್ಪಷ್ಟಪಡಿಸುತ್ತಾರೆ. ಹರಿನಾಮಸ್ಮರಣೆ ಮಾಡುವುದೊಂದೇ ನಮ್ಮ ಕೆಲಸ. ನಮ್ಮ ಯೋಗಕ್ಷೇಮವನ್ನು ಶ್ರೀಹರಿಯೇ ನೋಡಿಕೊಳ್ಳುವನೆಂಬ ಅಭಯವನ್ನು ದಾಸರು ನಮಗೆ ನೀಡುತ್ತಾರೆ. ಹೀಗೆ ಶ್ರೀಹರಿಯಲ್ಲಿ ಅಚಲವಾದ ಭಕ್ತಿಯನ್ನು ಮಾಡಿ ನಮ್ಮ ಚಿಂತೆಗಳಿಂದ ದೂರವಾಗಿ ಜೀವನ ಸಾರ್ಥಕ್ಯಗೊಳಿಸಿಕೊಳ್ಳುವ ಮಾರ್ಗವನ್ನು ದಾಸರು ಇಲ್ಲಿ ತಿಳಿಸಿಕೊಡುತ್ತಾರೆ.

**ಲೇಖಕ: ಗುರುಶ್ಯಾಮವಿಠಲದಾಸರು**
**ಶ್ರೀಗಿರಿಕೃಪಾ 7-5-86/115, ಜವಾಹರನಗರ, ರಾಯಚೂರು-584103**



**ಪುರಂದರದಾಸರ**

**ಉಗಾಭೋಗ ಅಧ್ಯಯನ**

# ಬೆರಗಾಗಿಸುವ ಉಗಾಭೋಗದಲಿ ಬಾಳಬೆಳಕು

ಅನುಭವವು ಹೆಚ್ಚಾದಂತೆ ಮನಸ್ಸು ಪರಿಪಕ್ವವಾದಂತೆ ಅವರ ಜ್ಞಾನಾನುಭವ ವಿಶೇಷವಾಗಿ ಬೆಳೆದಂತೆಲ್ಲ ಆಂತರಿಕವಾಗಿ ಚಿಂತಿಸಿ ಹಾಡಿರಬಹುದಾದ ನುಡಿಮುತ್ತುಗಳು ಉಗಾಭೋಗಗಳು ಎಂಬುದು **ಡಾ।। ಜಿ. ವರದರಾಜರಾವ್** ಅವರ ಅಭಿಪ್ರಾಯ. ಕೀರ್ತನೆಗಳಂತೆ ಪಲ್ಲವಿ, ಅನುಪಲ್ಲವಿ ನುಡಿಗಳ ಗೋಜುಗಳು ಗೊಂದಲವಿಲ್ಲದೆ ಮೊದಲಿನಿಂದ ಕೊನೆಯತನಕ ಏಕತಾನವಾಗಿ ಮತ್ತು ಕಾಂತಿಯುಕ್ತವಾಗಿ ಉಗಾಭೋಗಗಳು ಪ್ರಜ್ವಲಿಸುತ್ತವೆ. ಅವುಗಳಲ್ಲಿ ಶ್ರೀಪುರಂದರದಾಸರ ಉಗಾಭೋಗಗಳದೇ ಒಂದು ವೈಶಿಷ್ಟ್ಯ.

ಮನಃ ಶುದ್ಧಿಯಿಲ್ಲದೆ ಯಾವ ಮಂತ್ರಾಚರಣೆಯೂ ಯಾವ ತೀರ್ಥಸ್ನಾನವೂ ಪುಣ್ಯಪ್ರದವಾಗುವುದಿಲ್ಲ.

**ಮನಶುದ್ಧಿಯಿಲ್ಲದವನಿಗೆ ಮಂತ್ರದ ಫಲವೇನು**
**ತನುಶುದ್ಧವಿಲ್ಲದವನಿಗೆ ತೀರ್ಥದ ಫಲವೇನು**
**ಮಿಂದಲ್ಲಿ ಫಲವೇನು ಮೀನು ಮೊಸಳೆಯಂತೆ**
**ನಿಂದಲ್ಲಿ ಫಲವೇನು ಶ್ರೀಶೈಲದ ಕಾಗೆಯಂತೆ**
**ಹೊರಗೆ ಮಿಂದು ಒಳಗೆ ಮೀಯದವರ ಕಂಡು**
**ಬೆರಗಾಗಿ ನಗುತಿದ್ದ ಪುರಂದರವಿಠಲ.**

ಉಗಾಭೋಗಗಳು ವಿಶೇಷವಾಗಿ ಬಳಕೆಯಲ್ಲಿರುವ ಸಂಸ್ಕೃತ ಶ್ಲೋಕಗಳನ್ನು ಮತ್ತು ವೀರಶೈವ ಶರಣರ ವಚನಗಳನ್ನು ಹೋಲುತ್ತವೆ. ಉಗಾಭೋಗ ಮತ್ತು ವಚನಗಳ ಹೋಲಿಕೆಯು ಎಷ್ಟೆಂದರೆ ಅವುಗಳ ಅಂಕಿತವನ್ನು ತೆಗೆದು ನೋಡಿದಾಗ ಯಾವುದು ಉಗಾಭೋಗ, ಯಾವುದು ವಚನ ಎಂದು ಅರಿಯಲು ಶ್ರಮಪಡಬೇಕಾಗುತ್ತದೆ.

**ಲೇಖಕ: ಪ್ರೊ।। ಶಾಶ್ವತಸ್ವಾಮಿ ಮುಕ್ಕುಂದಿಮಠ**
**ವಿಶ್ರಾಂತ ಪ್ರಾಂಶುಪಾಲರು, ಪಟೇಲ್‌ವಾಡಿ, ಸಿಂಧನೂರು-584128.**
**ಲೇಖಕಿ: ಶ್ರೀಮತಿ ಶಕುಂತಲಾ ಆರ್. ಜಾಗಿರ್‌ದಾರ್**
**ನಂ. 766, 5ನೇ ಮುಖ್ಯರಸ್ತೆ, ಮಹಾಲಕ್ಷ್ಮೀಪುರಂ, ಬೆಂಗಳೂರು-86.**

**ಪುರಂದರದಾಸರ**

**ಉಗಾಭೋಗ ಅಧ್ಯಯನ**

## ಸಾರ್ಥಕ ಬದುಕಿನ ಯೋಗ - ಉಗಾಭೋಗ

ಶ್ರೀನಿವಾಸ ನಾಯಕರಾಗಿದ್ದು ಗುರೂಪದೇಶ ಹೊಂದಿ ಹರಿದಾಸರಾದ ಮೇಲೆ ಪುರಂದರದಾಸರು ತಾವು ರಚಿಸಿದ ಕೃತಿಗಳನ್ನೆಲ್ಲಾ ಪುರಂದರವಿಠಲನಿಗೆ ಅರ್ಪಣೆ ಮಾಡಬೇಕೆಂದು ಗುರುಗಳ ಅಪ್ಪಣೆಯಾಯಿತು. ಉಪದೇಶವಾದ ದಿನದಿಂದಲೇ ಅವರು ಮಾಡಿದ ಕೀರ್ತನೆಗಳನ್ನೆಲ್ಲ **ಪುರಂದರವಿಠಲ** ಮುದ್ರಿಕೆಯಿಂದ ಅಂಕಿತಗೊಳಿಸಿ ಶ್ರೀಹರಿಗೆ ಸಮರ್ಪಿಸುತ್ತ ಬಂದರು. ಶ್ರೀಹರಿಯು ಪ್ರತ್ಯಕ್ಷನಾಗಿ ದಾಸರಿಗೆ ಸಕಲಾರ್ಥ ಸಿದ್ಧಿಯನ್ನು ಅನುಗ್ರಹಿಸಿದನು. ಭಗವದ್ದರ್ಶನದಿಂದ ಪುಳಕಿತರಾದ ದಾಸರು ಆನಂದ ಭರಿತರಾಗಿ ಕಣ್ಣುಗಳಿಂದ ಆನಂದಾಶ್ರುಗಳು ಧಾರೆಧಾರೆಯಾಗಿ ಸುರಿಯುವ ಸಂದರ್ಭದಲ್ಲಿ,

**ಉದಯ ಅಸ್ತಮಾನವೆಂಬ ಎರಡು ಕೊಳಗಳಿಟ್ಟು।**
**ಆಯಸ್ಸು ಎಂಬೊರಾಸಿ ಅಳಿದು ಹೋಗುವ ಮುನ್ನ।**
**ಹರಿಯ ಭಜಿಸಿಬೇಕು ಮನಮುಟ್ಟಿ।**
**ಭಜಿಸಿದರೆ ತನ್ನ ಕಾರ್ಯವು ಘಟ್ಟಿ॥**

**ಹಾಗಲ್ಲದಿದ್ದರೆ ತಾಪತ್ರಯ ಬೆನ್ನಟ್ಟಿ।**
**ವಿಧಿಯೊಳು ಗೆಯ್ವಾಗ ಹೋದಯ್ಯ ಕಟ್ಟಿ।**
**ಪುರಂದರ ವಿಠಲನ ಕರುಣಾದೃಷ್ಟಿ।**
**ಅವನ ಮೇಲಿದ್ದರೆ ಅವ ಜಗಜಟ್ಟಿ॥**

ಮನುಷ್ಯನಾಗಿ ಹುಟ್ಟಿದ ಮೇಲೆ ಆಯಸ್ಸು ಇರುವತನಕ ಹರಿಯನ್ನು ಮನಮುಟ್ಟಿ ಭಜಿಸಿದರೆ ಶ್ರೀಹರಿಯ ಕೃಪೆಯಾಗುವದೆಂಬುದನ್ನು ಪುರಂದರದಾಸರು ತಿಳಿಸಿದ್ದಾರೆ.

**ಅಣುವಿಗೆ ಅಣುವಾಗಿ ಘನಕೆ ಘನವಾಗಿ।**
**ಗುಣತ್ರಯ ತತ್ವಕ್ಕೆ ಮೀರಿದ ದೊರೆಯಾಗಿ।**
**ತೃಣ ಮೊದಲಾಗಿ ಮೇರು ಪರ್ಯಂತ ಇರುವವ ನೀನಾಗಿ।**
**ಗುಣನಿಧಿ ಪುರಂದರವಿಠಲ ನಿನ್ನ ಮಹಿಮೆ।**
**ಎಣಿಕೆ ಮಾಡುವರ್ಯ್ಯಾರೋ ಎನ್ನಪ್ಪನೇ॥**

ಎಂಬ ಈ ಉಗಾಭೋಗದಲ್ಲಿ ಪರಮಾತ್ಮನು ಪರಿಪೂರ್ಣನಾಗಿರುವ ಗುಣವಂತನು, ನಿನ್ನ ಮಹಿಮೆ ಗಣನೆ ಮಾಡುವವರ್ಯ್ಯಾರು ಎಂದು ಅವನ ಸ್ವರೂಪ ಕುರಿತು ತಿಳಿಸಿದ್ದಾರೆ.



**ಪುರಂದರದಾಸರ**

**ಉಗಾಭೋಗ ಅಧ್ಯಯನ**

## ಅಹಂ ತೊರೆಸುವ ಸಾಧನ

**ಹರೀ ನೀ ಒಲಿವಂತೆ ಮಾಡು ।**
**ಒಲಿದರೆ ತಿರಿವಂತೆ ಮಾಡು**
**ತಿರಿದರೆ ದಾರು ನೀಡದಂತೆ ಮಾಡು ।**
**ನೀಡಿದರೆ ಹೊಟ್ಟೆ ತುಂಬದಂತೆ ಮಾಡು**
**ಹೊಟ್ಟೆ ತುಂಬಿದರೆ ಬಟ್ಟೆ ದೊರೆಯದಂತೆ ಮಾಡು ।**
**ಇಂಬು ದೊರೆಯದಿದ್ದರೆ**
**ದೇವ ನಿಮ್ಮ ಪಾದಾರವಿಂದರಲಿ ।**
**ಇಂಬಿಟ್ಟು ಸಲಹೊ ಪುರಂದರವಿಠಲ.**

ಅಲ್ಪ, ತೃಪ್ತಿ, ಕರ್ತವ್ಯ - ಇವುಗಳನ್ನು ಮರೆಯಬಾರದೆಂದು ನಮಗೆ ತಿಳಿಸಿರುವರು. ಲಭಿಸಿರುವ ಸುಖದಲ್ಲಿ ಅಲ್ಪ ತೃಪ್ತನಾಗಬೇಕು. ಸುಖಬಂದಾಗ ಗರ್ವ ಪಡದೆ ಕರ್ತವ್ಯ ಪ್ರಜ್ಞೆಯಿಂದ ಬಾಳಬೇಕು. ಸುಖ ಸಂಪತ್ತು ಬಂದಾಗ ಅಹಂ ಬರುವುದು ಸಾಮಾನ್ಯ.

ಭೃಗು ಮಹರ್ಷಿ ವಿಷ್ಣುವಿನ ಹೃದಯಕ್ಕೆ ಒದ್ದಾಗ, ಭೃಗುವಿನಲ್ಲಿಯ ಅಹಂ ಇಳಿಸಲು ಕಾಲಲ್ಲಿಯ ಕಣ್ಣನ್ನು ಕಿತ್ತಿದ್ದು, ದುರ್ಯೋಧನ , ಭಸ್ಮಾಸುರ, ಬಲಿಚಕ್ರವರ್ತಿ ಇವರ ಅಹಂಭಾವದ ಪ್ರಸಂಗಗಳಿಗೆ ಕೊನೆಗೆ ಸಾರಥಿಯಾದವ ಭಾಗ್ಯ ಕರುಣಿಸಿದ.

ನಿನ್ನ ನಾಮ ಉಸಿರಿದಾಗ ನೀನು ನಮ್ಮ ಹೃದಯದಲ್ಲಿ ನೆಲಸು ಎನ್ನುವ ಚಮತ್ಕಾರ ಇಂಬು ಎನ್ನುವ ಪದದಿಂದ ಸಮಯೋಚಿತವಾಗಿದೆ. ಯಾರಾದರೂ ನಮಗೆ ಆಶ್ರಯವಿತ್ತಾಗ ಅವರನ್ನು ಸ್ಮರಿಸುತ್ತೇವೆ. ದೇವಾ ಈ ಭೂಮಿಯ ಆಶ್ರಯವನಿತ್ತ ನಿನಗೆ ನಾವೆಲ್ಲ ಧನ್ಯರು. ಇಂಬು (ಆಶ್ರಯ) ಇಲ್ಲದಿರೆ ಏನಾಗುವೆದೆಂಬುದನ್ನೂ ಊಹಿಸಿ. ಸೃಷ್ಟಿಕರ್ತನಿಂದ ಬ್ರಹ್ಮಾಂಡದಲ್ಲಿ ಸರ್ವವೂ ಉಪಯೋಗಿಸುವಂತೆ ಮಾಡಿದವಗೆ ಧನ್ಯವಾದ ಹೇಳಬೇಕೆಂಬುದು ಉಚಿತ. ಇಟ್ಟಾಂಗೆ ಇರುವೆನೊ ಹರಿಯೇ ಎನ್ನುವ ಕೀರ್ತನೆ ಈ ಉಗಾಭೋಗಕ್ಕೆ ಪ್ರತಿಪಾದಿಸಿದಂತಾಗಿದೆ.

**ಲೇಖಕ: ನಾರಾಯಣ ಬಳ್ಳಾರಿ,**
**29/ಎ, ಧೀರಶ್ರೀ ಮಾರುತಿನಗರ ಬೆಮೆಲ್ ಅಂಚೆ ಕೋಲಾರ ಜಿಲ್ಲೆ**

# ಪುರಂದರದಾಸರು - ಉಗಾಭೋಗಗಳು

ಶ್ರೀ ಪುರಂದರದಾಸರು ಧರ್ಮಶಾಸ್ತ್ರ ವಿಚಾರಗಳನ್ನು ಸಜ್ಜನರ ಉದ್ಧಾರಕ್ಕಾಗಿ ಮನೆಮನೆಗೆ ತಲುಪುವಂತೆ ಹಾಗೂ ಹರಿಯ ಸ್ಮರಣೆಯಿಂದ ಒದಗುವ ಶಾಶ್ವತವಾದ ಸುಖ ಸಂತೋಷಗಳನ್ನು ಸುಲಭವಾದ ನುಡಿಗಳಿಂದ ರಚಿಸಿದ ಕೃತಿಯೇ ಉಗಾಭೋಗ. ಇವರು ಎಪ್ಪತ್ತೈದು ಸಾವಿರಕ್ಕೂ ಹೆಚ್ಚಾಗಿ ಉಗಾಭೋಗಗಳನ್ನು ರಚಿಸಿರುವರೆಂದು ವಿಜಯದಾಸರು ತಿಳಿಸುತ್ತಾರೆ. ಎರಡು ಸಾಲುಗಳಿಂದ ಇಪ್ಪತ್ತು ಸಾಲುಗಳವರೆಗೆ ಈ ಸಾಹಿತ್ಯದಲ್ಲಿ ಇರುವದು ಕಂಡುಬರುತ್ತದೆ. ಕೆಲವು ಉಗಾಭೋಗಗಳನ್ನು ಇಲ್ಲಿ ವಿಶ್ಲೇಷವಾಗಿ ಕೊಡಲಾಗಿದೆ.

**ಗಾಳಿಗಿಕ್ಕಿದ ದೀವಿಗೆಯಂತೆ ಈ ದೇಹ ।**
**ನಿಮಿಷವೋ ನಿಮಿಷಾರ್ಧವೋ ತಿಳಿಯಲಾಗದು ।**
**ಕಾಲಕಾಲಗಳಲಿ ಹರಿಗುಣ ಕಲ್ಯಾಣಗಳ ।**
**ಕೇಳದನ ಜನ್ಮ ವ್ಯರ್ಥವೋ ಪುರಂದರವಿಠಲ ॥**

ನಿತ್ಯಮುಕ್ತಳಾದ ಶ್ರೀಮಹಾಲಕ್ಷ್ಮಿಯು ಅವನ ಮಹಿಮೆಯನ್ನು ಸಂಪೂರ್ಣವಾಗಿ ಅರಿಯಲೆಂದು ಅವನ ಸೇವೆಯನ್ನು ಸದಾ ಮಾಡುತ್ತಾಳೆ. ಆದ್ದರಿಂದ ಅವನನ್ನು ಸದಾನೆನೆಯಬೇಕೆಂದು ಇಲ್ಲಿ ವರ್ಣಿಸಿರುತ್ತಾರೆ.

**ಎನ್ನಮ್ಮ ಸಿರಿದೇವಿ ಇನ್ನೂ ಅರಿಯಳು ಮಹಿಮೆ ।**
**ಕುನ್ನಿ ಮಾನವ ನಾನೇನು ಬಲ್ಲೆನೋ ।**
**ಪನ್ನಗಾದ್ರಿ ನಿಲಯನೇ ಪಾವನ ಮೂರುತಿ ಕೃಷ್ಣ ।**
**ಎನ್ನನುದ್ಧರಿಸಯ್ಯ ಪುರಂದರವಿಠಲ ॥**

ಹರಿಯನೇ ಯಾಕೆ ಅರ್ಚಿಸಬೇಕು, ಅದರ ಪ್ರಯೋಜನವೇನು ಎಂದು ಪ್ರಶ್ನೆ ಮಾಡುವ ಕುಹಕಿಗಳಿಗೆ ಎರಡೆ ಸಾಲುಗಳಲ್ಲಿ ಅದರಿಂದ ಒದಗುವ ಉತ್ಕೃಷ್ಟವಾದ ಫಲವನ್ನು ಈ ರೀತಿಯಲ್ಲಿ ಹೇಳಿರುವರು.

**ಹರಿ ನೀ ಮುನಿದರೆ ಆರು ಒಲಿದೇನು ಮಾಡುವರು**
**ಹರಿ ನೀ ಒಲಿದರೆ ಆರು ಮುನಿದೇನ ಮಾಡುವರು ಪುರಂದರವಿಠಲ**

**ಲೇಖಕಿ:ಶ್ರೀಮತಿ ಕೆ. ಶ್ಯಾಮಲ ಆರ್.ರಾವ್.(ಪ್ರಾಣನುತ ನರಸಿಂಹ ವಿಠಲ)**
**ಹನುಮದ್ವಿಲಾಸ, ತಪೋವನಂ, ಅನಂತಪುರಂ -4.**





**ಎನ್ನಕಡೆ ಹಾಯಿಸುವದು ನಿನ್ನ ಭಾರ। ನಿನ್ನ ನೆನೆಯುತ್ತಲಿಹುದು**
**ಎನ್ನ ವ್ಯಾಪಾರ। ಎನ್ನ ಸತಿಸುತರಿಗೆ ನೀನೇ ಗತಿ।**
**ನಿನ್ನನೊಪ್ಪಿಸುವದು ಎನ್ನ ನೀತಿ। ಎನ್ನ ಪಡಿ ಇಕ್ಕಿ ಸಲಹುವದು।**
**ನಿನ್ನ ಧರ್ಮ। ನಿನ್ನ ಅಡಿಗೆರಗುವದು ಎನ್ನ ಕರ್ಮ। ಎನ್ನ**
**ತಪ್ಪುಗಳನ್ನೆಣಿಸುವದು ನಿನ್ನದಲ್ಲ। ನಿನ್ನ ಅಡಿಗೆರಗುವದು**
**ಎನ್ನ ಕರ್ಮ। ನೀನಲ್ಲದೆ ಇನ್ನಾರಿಗೆ ಮೊರೆ ಇಡುವೆ**
**ಪುರಂದರವಿಠಲ॥**

ಈ ಮೇಲಿನ ಉಗಾಭೋಗದಲ್ಲಿ ಭಕ್ತ ಹಾಗೂ ಭಗವಂತನ ಸಂಬಂಧ ಹಾಗೂ **ನಿನ್ನ ಬಿಟ್ಟು ಬೇರೆ ಯಾರಿಗೆ ಮೊರೆ ಹೋಗಲು ಸಾಧ್ಯ, ನೀನೇ ರಕ್ಷಕ** ಎಂದು ಹೇಳಿದ್ದಾರೆ.

**ಹೃದಯದ ಮಲವನ್ನು ತೊಳೆಯಲರಿಯದೆ ತಾವು।**
**ಉದಯದೊಳೆದ್ದು**
**ಮಿಂದು। ಗದಗದಗುಟ್ಟುವಂತೆ ಅದರಿಂದೇನು ಫಲ। ಅದಕಿಂತ**
**ಉದಯಾಸ್ತಮಾನದೊಳಗಿಪ್ಪ। ಮುದಿಕಪ್ಪೆ ಮಾಡಿದ ತಪ್ಪೇನಯ್ಯ।**
**ಪುರಂದರವಿಠಲನ ನಾಮವ ನೆನೆಯದೆ ದಿನಕ್ಕೆನೂರು ಬಾರಿ**
**ಮುಳುಗಿದರೇನಯ್ಯ। ಎಂಬಲ್ಲಿ-**

ಬಾಹ್ಯಾಚರಣೆ, ಆಡಂಬರ ಮನದ ಮಲವನ್ನು ತೊಳೆಯದು। ಹರಿಯ ನಾಮದಿಂದ ಪರಿಶುದ್ಧನಾಗಬೇಕೆಂದು ತಿಳಿಸಿದ್ದಾರೆ. ಡಂಭಾಚಾರದಿಂದ ಹರಿ ದೊರೆಯನು, ಭಕುತಿಯಿಂದ ಮುಕುತಿ ಎಂದು ಸುಲಭವಾಗಿ ತಿಳಿಯುವಂತೆ ತಿಳಿಸಿದ್ದಾರೆ. ಶೃತಿಯ, ಸ್ಮೃತಿಯ ಉದಾಹರಣೆಗಳ ಮೂಲಕ ಉಗಾಭೋಗಗಳು ಒಳಗಣ್ಣನ್ನು ತೆರೆದು ಶ್ರೀಹರಿಯ ನೋಡುವಂತೆ ಮಾಡುವ ಪುರಂದರದಾಸರ ಉಗಾಭೋಗಗಳು ಜನಪ್ರಿಯವಾಗಿವೆ. ಬದುಕಿನ ಸಾರ್ಥ್ಯಕ್ಯಕ್ಕಿದು ಯೋಗವಾಗಿ ರೂಪುಗೊಂಡ ಉಗಾಭೋಗ. ದಾಸರು ಹರಿಸಿದ ಭಾಗ್ಯವನ್ನೋಣ.

**ಲೇಖಕಿ: ಡಾ॥ ಆರ್. ಲಕ್ಷ್ಮೀ**
**ಸಂಸ್ಕೃತ ಉಪನ್ಯಾಸಕರು, ಮಹಿಳಾ ಮಹಾವಿದ್ಯಾಲಯ, ಧಾರವಾಡ.**

## ತಿರುಪತಿಗೆ ಪಾದಯಾತ್ರೆ !

ಮುಳಬಾಗಲು, ನರಸಿಂಹತೀರ್ಥ, ಶ್ರೀ ಶ್ರೀಪಾದರಾಜರ ಸನ್ನಿಧಿಯಿಂದ ತಿರುಪತಿಗೆ ಪಾದಯಾತ್ರೆ: ತಾ॥ 16-2-2010 ಸಂಜೆ 4-00ಕ್ಕೆ ಪ್ರಾರಂಭವಾಗಿ ತಾ॥ 21-2-2010 ರಂದು ತಿರುಮಲವನ್ನು ಸೇರುವುದು. ಆಸಕ್ತಿಯುಳ್ಳ ಭಕ್ತಾದಿಗಳು ಭಾಗವಹಿಸಬಹುದು.

**ಪುರಂದರದಾಸರ**

**ಉಗಾಭೋಗ ಅಧ್ಯಯನ**

## ಜೀವನ ಜಾಗೃತಿಗಿದು ಮಂಗಳಪದ

**ಸತತ ಗಣನಾಥ ಸಿದ್ಧಿಯನೀವ ಕಾರ್ಯದಲಿ।**
**ಮತಿ ಪ್ರೇರಿಸುವಳು ಪಾರ್ವತೀದೇವಿ ಮು।**
**ಕುತಿ ಪಥವೀವ ಮನ ಮಹರುದ್ರದೇವರು ಭ।**
**ಕುತಿದಾಯಕಳು ಸಿರಿ ಭಾರತೀ ದೇವಿ॥**

ಪುರಂದರದಾಸರು ಈ ಉಗಾಭೋಗದಲ್ಲಿ ಸಮಸ್ತ ಸಿದ್ಧಿಪ್ರದನಾದ ವಿನಾಯಕನನ್ನು ಸ್ಮರಿಸಿ ಮುಂದೆ ಆರೋಹಣ ಕ್ರಮದಲ್ಲಿ ದೇವತಾ ತಾರತಮ್ಯವನ್ನು ಎಷ್ಟು ಸರಳ ಸುಂದರವಾಗಿ ನಿರೂಪಿಸಿದ್ದಾರೆ ಎಂಬುದನ್ನು ಗಮನಿಸಬೇಕು.

**ಗಣನಾಥ**ನ ಧ್ಯಾನದಿಂದ ನೆನೆದ ಕಾರ್ಯಗಳೂ ನಿರ್ವಿಘ್ನವಾಗಿ ನೆರವೇರುತ್ತವೆ. ತದನಂತರ ಬುದ್ಧಿಯನ್ನು ಪ್ರೇರೇಪಿಸುವುದಕ್ಕಾಗಿ **ಪಾರ್ವತಿ** ದೇವಿಯರ ಧ್ಯಾನ ಮುಂದೆ ಮೋಕ್ಷಮಾರ್ಗವನ್ನು ಅನುಗ್ರಹಿಸಲು **ರುದ್ರ**ದೇವರ ಚಿಂತನೆ, ಶ್ರೀಹರಿಯಲ್ಲಿ ಭಕ್ತಪ್ರದಳು ಭಕ್ತ್ಯಾಭಿಮಾನಿಯಾದ **ಭಾರತೀ**ದೇವಿ. ಭಕ್ತಿ ದಾರ್ಢ್ಯಕ್ಕೆ ಅವಶ್ಯಕವಾದ ನಿಶ್ಚಯಜ್ಞಾನವು ಸತ್ತರ್ಕಗಳಿಂದ ಸಂಶಯಗಳ ಪರಿಹಾರದ ನಂತರವೇ ಲಭ್ಯವಾದುದು. ವಿದ್ಯಾಧಿದೇವತೆ ಯಾದ ಬ್ರಹ್ಮದೇವರ ಪತ್ನೀ **ಸರಸ್ವತೀದೇವಿ**ಯು ಸಮೀಚೀನತರ್ಕಗಳ ಸಹಾಯದಿಂದ ಲಭಿಸುವ ಶಾಸ್ತ್ರಜ್ಞಾನವನ್ನು ದೊರಕಿಸುತ್ತಾಳೆ. ಸತ್ಕರ್ಮಗಳ ಆಚರಣೆಯಲ್ಲಿ ನಮ್ಮನ್ನು ಇಟ್ಟು ಆ ಶಾಸ್ತ್ರಜ್ಞಾನದ (ಯಥಾಯೋಗ್ಯ) ಪೂರ್ಣತೆಯನ್ನು ಕರುಣಿಸುವಾತನು ನಮ್ಮ ಹಾಗೂ ಸರ್ವಸುಜೀವರ ಉದ್ಧಾರಕರಾದ **ವಾಯುದೇವರು.** ಭಕ್ತಿಯುಕ್ತ ಧ್ಯಾನದಿಂದಲೇ ಶ್ರೀಹರಿಯ ಸಾಕ್ಷಾತ್ಕಾರವು. ಧ್ಯಾನಕಾಲದಲ್ಲಿ ದೊರೆಯುವ ಅಲೌಕಿಕ ಸುಖಾನುಭವವನ್ನೀಯುವಳೇ **ಶ್ರೀಲಕ್ಷ್ಮೀದೇವಿ.** ಆ ಸುಖವೇ ಸ್ವರೂಪ ಸ್ಥಿತಿಯಾದ ಆನಂದ ಸದೃಶ್ಯವಾದದ್ದು. ಇದನ್ನೇ **ಆನಂದ ಸುಖವನೀವಳು ರಮಾ** ಎಂದು ದಾಸರಾಯರು ಹೇಳಿದ್ದಾರೆ. ರಮಾದಿ ಪೂರ್ವೋಕ್ತ ಸಕಲದೇವತೆಗಳಲ್ಲಿ ಅಂತರ್ಯಾಮಿಯಾಗಿದ್ದು ಸರ್ವಕಾರ್ಯಗಳನ್ನು ನಡೆಸುವವನು **ಪುರಂದರವಿಠಲನು** ಶ್ರೀಹರಿಯು.

ಇಷ್ಟು ಮಹತ್ವದ್ದಾದ ಈ ಉಗಾಭೋಗವನ್ನು ಮಾಧ್ವ ಮತಾನುಯಾಯಿಗಳಾದ ಗಾಯಕರೂ, ಉಪನ್ಯಾಸಕರೂ ಮಂಗಳಾಚರಣೆಯ ಗೀತೆಯನ್ನಾಗಿ ಹಾಡುತ್ತಿರುವದೇ ಶ್ರೀಪುರಂದರದಾಸರಿಗೆ ಸಲ್ಲಿಸುವ ಭಕ್ತಿಯ ನಮನಗಳು.

**ಲೇಖಕ: ಎಸ್.ಜಿ. ರಾಮಚಂದ್ರರಾಯ (ನರಹರಿ ರಾಮಚಂದ್ರವಿಠಲದಾಸರು)**
**ನಂ 252, 6ನೇ ಅಡ್ಡರಸ್ತೆ, ಶ್ರೀನಿವಾಸನಗರ, ಬೆಂಗಳೂರು-50**



**ಪುರಂದರದಾಸರ**

**ಉಗಾಭೋಗ ಅಧ್ಯಯನ**

## ಹರಿಹರಿ ಎಂದವರಿಗೆ ನರಕದ ಭಯವೇಕೆ

ಕಿರಿಯದರಲ್ಲಿ ಹಿರಿಯರ್ಥವ ಪೇಳುವ ಉಗಾಭೋಗಗಳು ದಾಸ ಸಾಹಿತ್ಯದಲ್ಲಿ ವಿಶಿಷ್ಟವಾಗಿವೆ. ವಚನ ಸಾಹಿತ್ಯಕ್ಕಿಂತಲೂ ಸತ್ವವಾದ ಈ ಉಗಾಭೋಗಗಳು ಬೆರಗಿನ ವಚನಗಳೆನ್ನಬಹುದು. ಪುರಂದರದಾಸರ ಅನುಭವಗಳ ಬೆಡಗಿನಲ್ಲಿ ಇವು ಸಾಲು ಸಾಲಾಗಿ ಅರಳಿನಿಂತಿವೆ. **ಸತತ ಗಣನಾಥ ಸಿದ್ಧಿಯನೀವ ಕಾರ್ಯದಲಿ** ಎಂಬ ಪದವು ಎಷ್ಟು ಸರಳವಾಗಿ ಸಹಜವಾಗಿ ಖಚಿತವಾಗಿ ಹೇಳಿರುವುದ್ದನ್ನು ಕಾಣಬಹುದಾಗಿದೆ.

**ಸಾಟಿಯಂತೆ - ಬಡವರೊಳಗೆ ಎನ್ನಿಂದಾರು ಬಡವರಿಲ್ಲ**
**ಕೊಡುವರೊಳಗೆ ನಿನ್ನಿಂದಾರು ಕೊಡುವುರಿಲ್ಲ**
**ಧೃಡಭಕ್ತಿ ಎನಗೆ ನಿನ್ನಲ್ಲಿಯೆ ಕಲಿಸಿ**
**ಬಿಡದೆ ಸಲುಹಯ್ಯ ಶ್ರೀಪುರಂದರವಿಠಲ॥**

ಪರಮಾತ್ಮನಲ್ಲೇ ಧೃಡಭಕ್ತಿ ಮೂಡಲು ಚಿತ್ತಚಾಂಚಲ್ಯವಾಗದಂತೆ ಅರಿಷಡ್ವರ್ಗಗಳು ಕಾಡದಂತೆ ನನ್ನನ್ನು ಕಷ್ಟಕ್ಕೇ ಒಡ್ಡು ಎಂದೆನ್ನುತ ದೇವದೇವರಲ್ಲಿ ಮೊರೆಯಿಡುತ್ತ - ತಿಂಬಲು ಅನ್ನ ಹುಟ್ಟಲಿ ಬೇಡ । ಅನ್ನ ಹುಟ್ಟಿದರೆ ಬಟ್ಟೆ ದೊರಕಲಿ ಬೇಡ । ಬಟ್ಟೆ ದೊರಕಿದರೆ ಇಂಬು ತೋರಲಿಬೇಡ । ಇಂಬು ನಿನ್ನ ಪಾದಕಮಲದಲಿ ಸಂತೋಷತೋರಿಸಯ್ಯ । ಇಂದಿರಾರಾಧ್ಯ ಶ್ರೀ ಪುರಂದರವಿಠಲ ॥

**ಒರತೆ ಇದ್ದರೆ ಫಲವೇನು ಜಲವಿಲ್ಲದನಕ**
**ಧನವಿದ್ದರೆ ಫಲವೇನು ಮನವಿಲ್ಲದನಕ**
**ಏನು ಇದ್ದೊಡೇನು ಜ್ಞಾನವಿಲ್ಲದನಕ**

ತನುವಿದ್ದರೆ ಫಲವೇನು ಪುರಂದರವಿಠಲನ ಊಳಿಗ ಮಾಡದನಕ ನಶ್ವರವಾದ ಈ ಜೀವನವು ನೀರ ಮೇಲಣ ಗುಳ್ಳೆಯಂತೆ. ದಾನ ಧರ್ಮಾದಿಗಳನ್ನು ಮಾಡುತ್ತ, ಅತಿಥಿಯಾಗಿ ಮನೆಗೆ ಬಂದರೆ ತುತಿಸಿ ಅನ್ನವನ್ನಿಡಬೇಕು.

ಅಂಧ, ದೀನ, ಕೃಪಣರಿಗೆ ಅನ್ನಪಾನವೀಯಬೇಕು ಹೀಗೆ ಅನ್ನದಾನ ಮಹತ್ವ ತಿಳಿಸಿರುವರು.

ಇಂದಿನ ಧಾವಂತದ ದಿನಗಳಲ್ಲಿ ದಾಸರ ಈ ಉಗಾಭೋಗಗಳು ಸರ್ವರಿಗೂ ಶಾಂತಿಯನ್ನಿತ್ತು ಮನಸ್ಸನ್ನು ಹಿಡಿತದಲ್ಲಿಟ್ಟುಕೊಳ್ಳುವಷ್ಟು ಶಕ್ತಿಯುತವಾಗಿವೆ.

**ಲೇಖಕ : ಹಣಮಂತ ತಾಸಗಾಂವಕರ**
**ಸುಧನ್ವ ಸೆಕ್ಟರ ನಂ - 18/25 ನವನಗರ, ಬಾಗಲಕೋಟೆ**

**ಪುರಂದರದಾಸರ**

**ಉಗಾಭೋಗ ಅಧ್ಯಯನ**

# ಉಗಾಭೋಗ-ಪಂಚಧಾತುಗಳ ಕೂಡುವಿಕೆ

ಅಗಣಿತ ಜ್ಞಾನ ಕಣಜವಾದ ಹರಿದಾಸರ ಕೃತಿಗಳು ಸಮಾಜಕ್ಕೆ ಸಂದ ಅಪೂರ್ವಕಾಣಿಕೆಗಳು. ಉಗಾಭೋಗಗಳು ಹರಿದಾಸರ ಸಾಮಾಜಿಕ ಕಳಕಳಿ, ಧಾರ್ಮಿಕ ಗ್ರಂಥಗಳ ಆಳವಾದ ಪರಿಚಯ ಹಾಗೂ ಕನ್ನಡ ಭಾಷೆಯ ಮೇಲಿನ ಹಿಡಿತವನ್ನು ಎತ್ತಿ ತೋರಿಸುತ್ತದೆ. ಜ್ಞಾನ ಚಕ್ಷುಗಳಿಗೆ ಮಾತ್ರ ಇಂಥಹ ಮಹಾಕಾರ್ಯ ಮಾಡಲು ಸಾಧ್ಯ . ಉಗಾಭೋಗಗಳ ರಚನೆಯ ಬಗ್ಗೆ ಯೋಚಿಸಿದರೆ ಇದು ನಾಲ್ಕು ಐದು ಶತಮಾನಗಳಷ್ಟು ಹಳೆಯದು. ಪಂಡಿತರ ಅಭಿಪ್ರಾಯದಂತೆ ಉಗಾಭೋಗಗಳು ಪಂಚಧಾತುಗಳನ್ನು ಒಳಗೊಂಡಿರುತ್ತದೆ : ಉದ್ಗ್ರಾಹ, ಮೇಲಾಪಕ, ಅಂತರ, ಆಭೋಗ, ಧ್ರುವ ಇವೇ ಆ ಐದು ಧಾತುಗಳು, ಮೇಲ್ನೋಟಕ್ಕೆ ಸರಳವಾಗಿ ಕಂಡರೂ ಉಗಾಭೋಗಗಳಲ್ಲಿ ಇಷ್ಟೂ ಅಡಕವಾಗಿರುತ್ತವೆ ಎಂದರೆ ಆಶ್ಚರ್ಯವೇ ಸರಿ. ಸ್ವರ ಪ್ರಧಾನ ಗೀತೆಯಾಗಿ ಜನರಿಗೆ ಸುಲಭವಾಗಿ ಹಾಡಲು ಹಾಗೂ ಅರ್ಥಮಾಡಿಕೊಳ್ಳಲು ಅನೂಕೂಲವಾದ ರಚನೆಗಳು.

ಕೆಲವರು ಇದನ್ನು ಉಗಾಭೋಗ ಎಂದರು. ಉ ಎಂದರೆ ಊರ್ಧ್ವಲೋಕಕ್ಕೆ ಗಾ ಎಂದರೆ ಹೋಗುವುದು ಎಂದು ಅರ್ಥೈಸಿದ್ದಾರೆ. ಛಂದಸ್ಸಿನ ಕಟ್ಟುಪಾಡು ಇಲ್ಲದೆ ರಾಗದಿಂದ ಕೂಡಿದ ಸಣ್ಣ ಕವಿತೆ ಉಗಾಭೋಗ. ಪುರಂದರದಾಸರು ಉಗಾಭೋಗಗಳನ್ನು ಎಲ್ಲ ರೀತಿಯ ಅಂದರೆ ಪಂಡಿತ ಪಾಮರರಿಗೂ ಅರ್ಥವಾಗುವಂತೆ ರಚಿಸಿದ ನಾರದಾಂಶ ಪುರುಷರು. ಇಹ ಲೋಕದ ವ್ಯಾಪಾರವೇ ಮುಖ್ಯವಲ್ಲ, ಪರಮಾತ್ಮನ ಸನ್ನಿಧಿಗೆ ತೆರಳುವ ಮಾರ್ಗವನ್ನು ತೋರಿಸಿರುವರು.

**ಹಾಡಿದರೆ ಎನ್ನೊಡೆಯನ ಹಾಡುವೆ**
**ಬೇಡಿದರೆ ಎನ್ನೊಡೆಯನ ಬೇಡುವೆ**

ನಾನು ನರರಲ್ಲಿ ಬೇಡುವುದಿಲ್ಲ, ನಾನು ಬಡವ, ನನಗೆ ಕೊಡು ಎನ್ನುವುದಿಲ್ಲ ಬದಲು ಶ್ರೀಹರಿಯಲ್ಲಿ ಬೇಡುವೆ, ಎನ್ನುತ್ತಾರೆ ದಾಸರಾಯರು. ಶ್ರೀಹರಿಯಲ್ಲಿ ಅನನ್ಯ ಭಕ್ತಿಯ ಬಗ್ಗೆ ಕುರಿತಾದ ಈ ಸಾಲುಗಳು ಎಷ್ಟು ಜನರಿಗೆ ಮೇಲ್ಪಂಕ್ತಿಯಾದೀತು ?

**ಲೇಖಕಿ: ಪಂಕಜ ಸುಭೋದ,**
**ಹರಿತ್ಸ, ನೆಹರೂ ರೋಡ್, ಗಿರಿನಗರ, ಬೆಂಗಳೂರು.**



**ಪುರಂದರದಾಸರ**

**ಉಗಾಭೋಗ ಅಧ್ಯಯನ**

# ನಿತ್ಯ ಜೀವನ ಶುದ್ಧಿಗಾಗಿ ಉಗಾಭೋಗವ ಪಾಡಿ

ಶ್ರೀ ವಿಜಯದಾಸರು ಮತ್ತು ಶ್ರೀ ಗೋಪಾಲದಾಸರಿಗೆ ಹೋಲಿಸಿದರೆ ಶ್ರೀ ಪುರಂದರದಾಸರು ರಚಿಸಿದ ಉಗಾಭೋಗಗಳ ಸಂಖ್ಯೆ ಕಡಿಮೆ ಆದರೂ, ಶ್ರೀ ಪುರಂದರದಾಸರು ರಚಿಸಿದ ಕೆಲವೇ ಪ್ರಸಿದ್ಧ ಉಗಾಭೋಗಗಳಲ್ಲಿ ಅವರಲ್ಲಿರುವ ಸಮಾಜದ ಕಳಕಳಿ ಚಿಂತನೆ, ಜೀವನದ ತಾತ್ವಿಕತೆಯನ್ನು ಕಾಣಬಹುದು. ಅವರು ಶ್ರೀಹರಿಯಲ್ಲಿ ಭಕ್ತಿ ಹುಟ್ಟಬೇಕಾದರೆ ಕೇವಲ ದೇಹ ಶಬ್ದ ಇದ್ದರೆ ಸಾಲದು, ಮನಸ್ಸು ಕೂಡ ನಿರ್ಮಲವಾಗಿರಬೇಕೆಂಬುದನ್ನು ತಮ್ಮ ಉಗಾಭೋಗಗಳಲ್ಲಿ ಚಿಂತಿಸಿದ್ದಾರೆ.

**ಹೊಲೆಯ ಬಂದಾನೆಂದು ಒಳಗೆ ದೇವರ ಮಾಡಿ**
**ಘಣ ಘಣ ಗಂಟೆ ಬಾರಿಸುತ - ತನುವಿನ ಕೋಪ**
**ಹೊಲೆಯಲ್ಲಿವೇನಯ್ಯ ಮನಸ್ಸಿನ ವಂಚನೆ ಹೊಲೆಯಲ್ಲವೇನಯ್ಯ**
**ಇಂಥಾ ಹೊರಗಿದ್ದ ಹೊಲೆಯನ್ನು ಒಳಗೆ ತುಂಬಿಟ್ಟು ಕೊಂಡು**
**ಇದಕೇನು ಮದ್ದು ಶ್ರೀಪುರಂದರವಿಠಲ**

ಜಾತಿಯಲ್ಲಿ ಕೀಳು ಮನುಷ್ಯ(ಹೊಲೆಯ)ನು ಅಸ್ಪೃಶ್ಯನು, ಮನೆಯ ಮುಂದೆ ಬಂದಾನೆಂದು, ದೇಹದಲ್ಲಿ ಕೋಪವನ್ನು, ಮನಸ್ಸಿನಲ್ಲಿ ವಂಚನೆ ಇಟ್ಟುಕೊಂಡು ಘಣ ಘಣ ಗಂಟೆ ಬಾರಿಸಿದರೆ, ಮನಸ್ಸಿನಲ್ಲಿರುವ ಕೋಪತಾಪಗಳು, ವಂಚನೆಗಳು ತೊಲಗುವವೇ. ಇಲ್ಲಿ ಹೊಲೆಯನನ್ನು ಹೋಲಿಸಿರುವದು ಕೆಟ್ಟಗುಣಗಳಿಗೆ. ಶ್ರೀ ಪುರಂದರರಲ್ಲಿ ಭಕ್ತಿ ಬರಬೇಕಾದರೆ ಈ ದುರ್ಗುಣಗಳು ದೂರವಾಗಬೇಕೆಂಬುದು ಅವರ ಚಿಂತನೆ .

ಮನಸ್ಸಿನಲ್ಲಿ ಕಲ್ಮಷವನ್ನು ತುಂಬಿಕೊಂಡು, ಅದನ್ನು ಹೋಗಲಾಡಿಸದೇ ಬೆಳಿಗ್ಗೆ ಎದ್ದು ಗಡಗಡ ನಡುಗುತ, ತಣ್ಣೀರಿನಲ್ಲಿ ಸ್ನಾನ ಮಾಡಿದರೆ ಫಲವೇನು. ಶ್ರೀ ಪುರಂದರವಿಠಲನ ನಾಮಸ್ಮರಣೆಯನ್ನು ಮಾಡದೇ ದಿನಕ್ಕೆ ನೂರುಬಾರಿ ನೀರಿನಲ್ಲಿ ಮುಳುಗಿದರೇನು ಫಲ.

ಈ ರೀತಿಯಾಗಿ ಶ್ರೀ ಪುರಂದರದಾಸರು, ಶ್ರೀ ಹರಿಯಲ್ಲಿ ಭಕ್ತಿ , ಜ್ಞಾನ ಹುಟ್ಟಬೇಕಾದರೆ ದೇಹದ ಶುದ್ಧಿಯ ಜೊತೆಗೆ ಮನಸ್ಸಿನ ಶುದ್ಧಿಯು ಇರಬೇಕೆಂಬುದನ್ನು ತಮ್ಮ ಉಗಾಭೋಗಗಳಲ್ಲಿ ಚಿತ್ರಿಸಿದ್ದಾರೆ.

**ಲೇಖಕ : ನರಸಿಂಹರಾವ್ ದೇಶಪಾಂಡೆ**
**ನಂ. 8-11-117, ಅನುಗ್ರಹ, ಎನ್.ಜಿ.ಜಿ.ಕಾಲೋನಿ, ನೀಲಕಂಠೇಶ್ವರನಗರ, ರಾಯಚೂರು-3**

ಪುರಂದರದಾಸರ

ಉಗಾಭೋಗ ಅಧ್ಯಯನ

## ತಂಬೂರಿ ಮೀಟಿದವ

ತಂಬೂರಿ ಮೀಟಿದವ ಭವಾಬ್ಧಿದಾಟಿದವ ।
ತಾಳವ ತಟ್ಟಿದವ ಸುರರೊಳು ಸೇರಿದವ ॥
ಗೆಜ್ಜೆಯ ಕಟ್ಟಿದವ ಖಳರೆದೆ ಮೆಟ್ಟಿದವ ।
ಗಾಯನ ಪಾಡಿದವ ಹರಿಮೂರ್ತಿ ನೋಡಿದವ ॥
ಪುರಂದರವಿಟ್ಠಲನ ಪಾಡಿದವ ವೈಕುಂಠಕೋಡಿದವ ॥

ಇದೊಂದು ಪುರಂದರದಾಸರ ಪ್ರಖ್ಯಾತವಾದ ಪುಟ್ಟ ಉಗಾಭೋಗ. ಒಂದು ಉಗಾಭೋಗ ಹತ್ತುದೇವರನಾಮಕ್ಕೆ ಸಮ ಎಂದು ಬಲ್ಲವರು ಹೇಳುತ್ತಾರೆ. ಕೇವಲ ನಾಲ್ಕೈದು ಸಾಲುಗಳಲ್ಲೇ ಅನಂತ ಅಪಾರ ಅರ್ಥಹೊಂದಿರುತ್ತದೆ.

ಪ್ರಸ್ತುತ ಈ ಉಗಾಭೋಗದಲ್ಲಿ ತಂಬೂರಿ ಎಂದರೆ ನಮ್ಮ ಶರೀರ. ಶರೀರದಲ್ಲಿರುವ ನರಗಳೇ ತಂಬೂರಿಯ ತಂತಿಗಳು. ಸರಿಯಾದ ಶ್ರುತಿಯಲ್ಲಿ ಇಟ್ಟು ಮೀಟಬೇಕು, ಝೇಂಕರಿಸಬೇಕು ನಮ್ಮ ನರಗಳಿಂದ ಓಂಕಾರ ಶ್ರೀಕಾರ ಹೊರಹೊಮ್ಮಿಸಬೇಕು. ಶ್ರುತಿ ಸಮ್ಮತವಾದ ಪದಗಳ ಝೇಂಕಾರವಾಗಬೇಕು. ನಿರಂತರ ಗುಣಗಾನ ಮಾಡುತ್ತಿರಬೇಕು. ಓರ್ವ ಮಹಾಭಕ್ತ ತನ್ನ ಶರೀರವನ್ನೇ ತಂಬೂರಿ ( ವೀಣೆ) ಮಾಡಿಕೊಂಡು ನರಗಳನ್ನೇ ತಂತಿಮಾಡಿ ಮೀಟಿ ಹಾಡಿ ಶಿವನನ್ನು ಒಲಿಸಿಕೊಂಡ ಕಥೆ ಎಲ್ಲರೂ ಕೇಳಿರಬಹುದು.

ವಿಜಯದಾಸರು, ಗೋಪಾಲದಾಸರು, ಜಗನ್ನಾಥದಾಸರು, ಮುದ್ದು ಮೋಹನದಾಸರು, ತಂದೆ ಮುದ್ದು ಮೋಹನದಾಸರು, ಗುರುಗೋವಿಂದದಾಸರು ಮುಂತಾದವರು ಮೀಟಿದ ತಂಬೂರಿ ಇಂದಿಗೂ ಸಹ ಅವರ ವಂಶಸ್ಥರ ಮನೆಗಳಲ್ಲಿ ಮತ್ತು ಶಿಷ್ಯ ಪ್ರಶಿಷ್ಯರ ಮನೆಗಳಲ್ಲಿ ಇರುವುದನ್ನು ಕೇಳಿದ್ದೇವೆ, ಕಂಡಿದ್ದೇವೆ, ಇವರೆಲ್ಲ ತಂಬೂರಿ ಮೀಟಿ ಭವಾಬ್ಧಿದಾಟಿದವರು.

**ತಾಳವ ತಟ್ಟಿದವ ಸುರರೊಳು ಸೇರಿದವ :-**

ಕನಕದಾಸರು ಹೇಳಿರುವಂತೆ ತಾಳವ ಶಿವಪ್ಪ ತಟ್ಟಾನ್ಯ. ಶಿವ ತಾಳ ತಟ್ಟಿ ಮಹಾದೇವನಾಗಿ ವೈಷ್ಣವಾಗ್ರೇಸರನೆಂದೆನಿಸಿಕೊಂಡಿದ್ದಾನೆ. ತಾಳ ತಟ್ಟುವಾಗ ಐದು ಕೈಬೆರಳುಗಳೂ ಸೇರಿರುತ್ತವೆ. ಕೈ ಬೆರಳುಗಳುಲ್ಲಿ ತೋರುಬೆರಳು ಜೀವ, ಹೆಬ್ಬೆರಳು ಪರಮಾತ್ಮ ತೋರುಬೆರಳಿನ ಪಕ್ಕದ ಮಧ್ಯದ ಬೆರಳು ಕರ್ಮ. ಅದರ ಪಕ್ಕದ್ದು (ತರ್ಜನಿ) ಅವಿದ್ಯಾಸಂಕೇತ ಯಾವಾಗಲೂ ಜೀವ ಪರಮಾತ್ಮನಿಂದ ದೂರವಿದ್ದು ಅವಿದ್ಯಾ, ಕಾಮನೆ ಹಾಗೂ ಕರ್ಮಗಳೊಂದಿಗೆ ಇದ್ದು ಪಡಬಾರದ ಪಾಡು ಪಡುತ್ತಿರುತ್ತಾನೆ.



ಪುರಂದರದಾಸರ

ಉಗಾಭೋಗ ಅಧ್ಯಯನ

ಕ್ರಿಮಿ ಕೀಟಕನಾಗಿ ಹುಟ್ಟಿದಂದು ನಾನು
ಹರಿ ಶರಣಂದೆನಲುಂಟೆ
ಹಕ್ಕಿ ಹರಿಣಿಯಾಗಿ ಹುಟ್ಟಿದಂದು ನಾನು
ಹರಿ ಶರಣದೆನಲುಂಟೆ
ಮೆರೆದೆ ಮಾನವ ನಿನ್ನ ಹಿಂದಿನ ಭವಗಳನಂದು
ಮಾನುಷ ದೇಹ ಬಂದಿತೊ ನಿನಗೀಗ
ನೆನೆಯಲೊ ಬೇಗ ಪುರಂದರವಿಠಲ

ಪುರಂದರ ದಾಸರು, ನರ ಜನ್ಮ ಬಂದಾಗ, ನಾಲಿಗೆ ಇರುವಾಗ, ನಾರಾಯಣ ಎನ್ನಿರೊ ಎಂಬ ತತ್ವವನ್ನು ಸಾರಿ ಹೇಳಿದ್ದಾರೆ. ಕ್ರಿಮಿ, ಕೀಟ, ಪಕ್ಷಿ, ಪ್ರಾಣಿಯಾಗಿ ನಾನಾ ಯೋನಿಗಳಲ್ಲಿ ಜನಿಸಿದಾಗ ಬಾಯಿ ತುಂಬಾ ಪರಮಾತ್ಮನ ನಾಮಸ್ಮರಣೆಯನ್ನು ಮಾಡಿ, ಭಕ್ತಿಯಿಂದ ನಮಸ್ಕರಿಸಲು ಆಗುವುದಿಲ್ಲ. ದೇವರು ಮಾನವ ದೇಹಕೊಟ್ಟಾಗ, ವ್ಯರ್ಥವಾಗಿ ಕಾಲಹರಣ ಮಾಡದೆ, ಪರಮಾತ್ಮನ ನಾಮಸ್ಮರಣೆ ಮಾಡಿ, ಪರಲೋಕದಲ್ಲಿ ಉತ್ತಮಗತಿಯನ್ನು ಹೊಂದಿ. ದೇವರ ಅನುಗ್ರಹಕ್ಕೆ ಪಾತ್ರನಾಗು ಎಂದು ಹೇಳಿ, **ಕಲಿಯುಗದಲ್ಲಿ ಹರಿಯ ನಾಮಸ್ಮರಣೆ ಮಾಡಿದರೆ ಕುಲಕೋಟಿಗಳು ಉದ್ಧಾರವಾಗುತ್ತದೆ** ಎನ್ನುವ ಸಂದೇಶವನ್ನು ಸಾರಿದ್ದಾರೆ.

**ಲೇಖಕಿ: ಶ್ರೀಮತಿ ಪರಿಮಳಾ ಶೇಷಗಿರಿರಾವ್**
**1614 ಎ ಮುನೀಶ್ವರ ಬ್ಲಾಕ್, 19 ನೇ ಮೈನ್ ಬೆಂಗಳೂರು -26**

**ಮಾಹಿತಿ ಸಂಗ್ರಹ** (Data Bank)

ಮಾಧ್ವಮತಗಳಲ್ಲಿ ಹಾಗೂ ಮಾಧ್ವ ಸಂಸ್ಥೆಗಳಲ್ಲಿ ಕೆಳಕಂಡ ಹುದ್ದೆಗಳಿಗಾಗಿ **ರಂಗವಿಠಲ** ಕಾರ್ಯಾಲಯವು ಮಾಹಿತಿ ಸಂಗ್ರಹದ ಕಾರ್ಯದಲ್ಲಿ ತೊಡಗಿರುವುದರಿಂದ ಸತ್ಸಂಪ್ರದಾಯ ಹೊಂದಿದ ಮಾಧ್ವರು ಮಾತ್ರ ಅರ್ಜಿಯನ್ನು ಕಳುಹಿಸಬೇಕಾಗಿ ತಿಳಿಸಲಾಗಿದೆ. ಯುವಜನರಿಗೆ ವಿಶೇಷ ಬೇಡಿಕೆ ಇರುತ್ತದೆ.

ವಿದ್ವಾಂಸರು, ವೇದಪಾರಂಗತರು, ಉಪನ್ಯಾಸಕರು, ಅಧ್ಯಾಪಕರು, ಪುರೋಹಿತರು (ತ್ರಿಮತಸ್ಥರು), ಅರ್ಚಕರು, ನುರಿತ ಅಡಿಗೆಯವರು, ಆಫೀಸ್ ಮ್ಯಾನೇಜರ್, ಡಿ.ಟಿ.ಪಿ , Proof Readers, ಲೆಕ್ಕ ಪರಿಶೋಧಕರು (Accountant)

ಉದ್ಯೋಗಾವಕಾಶವನು ಒದಗಿಸಲು ಹಾಗೂ ಸಂಸ್ಥೆಗಳಿಗೆ ನೆರವಾಗಲು **ರಂಗವಿಠಲ** ಹಮ್ಮಿಕೊಂಡಿರುವ ಮಾಹಿತಿ ಸಂಗ್ರಹ ಯೋಜನೆ.

ವಿವರಗಳೊಂದಿಗೆ ಕೂಡಲೇ ಸಂಪರ್ಕಿಸಿ :
**ರಂಗವಿಠಲ ಕಾರ್ಯಾಲಯ**
ನಂ. 58, ರಾಘವೇಂದ್ರ ಕಾಲೋನಿ, ಚಾಮರಾಜಪೇಟೆ, ಬೆಂಗಳೂರು–18
ದೂರವಾಣಿ 080–26914637.rangavittala.sripada@gmail.com

ಪುರಂದರದಾಸರ

ಉಗಾಭೋಗ ಅಧ್ಯಯನ

## ಉಗಾಭೋಗ-ಸಾರವತ್ತಾದ ಪ್ರಕಾರ

ಉಗಾಭೋಗವು ಹರಿದಾಸ ಸಾಹಿತ್ಯದಲ್ಲಿ ತೀರ ಚಿಕ್ಕದಾದ ಚೊಕ್ಕವಾದ ಸಾರವತ್ತಾದ ಪ್ರಾಕಾರ. ಲಘುವಾದ ಬಂಧ. ಸಂಗೀತದ ತಳಗಟ್ಟಿಯ ಮೇಲೆ ರೂಪಿತವಾದ ಪುಟ್ಟ ರಸಗಟ್ಟಿಯ ಹಾಗೆ. ಸಂಸ್ಕೃತ ಶ್ಲೋಕಕ್ಕೆ ಸಂವಾದಿಯಾದ ಪ್ರಕಾರವಾಗಿದ್ದು ಕೇಳುಗರಲ್ಲಿ ಆದರ ಮೂಡಿಸಿ, ಆನಂದವನ್ನು ಉಂಟುಮಾಡುತ್ತದೆ. ಉಗಾಭೋಗದ ದಾಟಿಯನ್ನು ಕಂಡಾಗ ಜಾನಪದ ಗೀತೆಗಳಂತೆ ಅನುಭವದಾಳದಿಂದ ಬಂದ ಭಾವಗೀತೆಗಳಂತೆ ಕಾಣುತ್ತವೆ. ಹಲವಾರು ವಿದ್ವಾಂಸರು ತಮ್ಮ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ.

**ಒಂದು ಕಾಲದಲ್ಲಿ ಆನೆ ಕುದುರೆ ( ಮೇಲ್ಮೆರೆಸುವೆ ) ಏರಿಸುವೆ**
**ಒಂದು ಕಾಲದಲ್ಲಿ ಬರಿಗಾಲಿನಿಂದ ನಡೆಸುವೆ**
**ಒಂದು ಕಾಲದಲ್ಲಿ ಅಮೃತಾನ್ನವನುಣಿಸುವೆ**
**ಒಂದು ಕಾಲದಲ್ಲಿ ಉಪವಾಸವಿರಿಸುವೆ.**
**ನಿನ್ನಳವ ನೀನೆ ಬಲ್ಲೆ ನಾನೇನ ಬಲ್ಲೆನಯ್ಯಾ**
**ಪನ್ನಗಶಯನ ಪುರಂದರವಿಠಲ**

ಪುರಂದರದಾಸರು ಈ ಉಗಾಭೋಗದಲ್ಲಿ ಹರಿಯ ಚಿತ್ತಕ್ಕೆ ಬಂದದ್ದು ನಡೆಯುತ್ತದೆ. ಅವನು ಆಡಿಸಿದಂತೆ ಆಡುವ ಗೊಂಬೆಗಳು ನಾವು. ಸೂತ್ರಧಾರ ಅವನು ಎಂದಿದ್ದಾರೆ. ಅವನ ಮನಸ್ಸಿಗೆ ಬಂದರೆ ಆನೆ ಕುದುರೆಯ ಮೇಲೆ ಮೆರವಣಿಗೆ ಮಾಡಿಸಿ, ಸುಖದ ಸುಪ್ಪತ್ತಿಗೆಯಲ್ಲಿ ತೇಲಾಡಿಸುತ್ತಾನೆ. ಅವನ ಅನುಗ್ರಹ ತಪ್ಪಿದರೆ ನೆಲದ ಮೇಲೆ ಬರಿಗಾಲಲ್ಲಿ ನಡೆಯುವಹಾಗೆ ಮಾಡುತ್ತಾನೆ. ಕೆಲವೊಮ್ಮೆ ಬೇಕು ಬೇಕಾದ ಮೃಷ್ಟಾನ್ನವನ್ನು ಉಣಿಸಿದರೆ ಮತ್ತೆ ಕೆಲವು ವೇಳೆ ಹೊಟ್ಟೆಗೆ ಏನೂ ಸಿಗದೆ ಉಪವಾಸ ಕೆಡವುತ್ತಾನೆ. ಯಾರೂ ಅವನ ಮಹಿಮೆಯನ್ನು ಅರಿಯರು. ಆ ಭಗವಂತನೇ ಸರ್ವತಂತ್ರ ಸ್ವತಂತ್ರನು. ಅವನು ಎಲ್ಲವನ್ನು ಬಲ್ಲವನು . ಅವನನ್ನು ಬಲ್ಲವರು ಯಾರೂ ಇಲ್ಲ. ಅವನು ಇರಿಸಿದಂತೆ ಇರುವವರು ನಾವು ಎಂದು ದಾಸರು ಮನಮುಟ್ಟುವಂತೆ ಹೇಳಿದ್ದಾರೆ.



ಪುರಂದರದಾಸರ

ಉಗಾಭೋಗ ಅಧ್ಯಯನ

ಆದರೆ ಈ ಜೀವ (ತೋರುಬೆರಳು) ಪರಮಾತ್ಮ (ಹೆಬ್ಬೆರಳು) ನೊಂದಿಗೆ ಸೇರಿದಾಗ ಅವಿದ್ಯಾ , ಕಾಮನೆ, ಕರ್ಮಗಳು ಜ್ಞಾನ - ಭಕ್ತಿ - ವೈರಾಗ್ಯಗಳಾಗಿ ಬದಲಾಗುತ್ತವೆ. ಆಗ ಮನುಷ್ಯ (ಜೀವ) ತಾಳ ಬದ್ಧವಾಗಿ ( 5 ಬೆರಳಗಳನ್ನು ಸೇರಿಸಿ) ಜ್ಞಾನ - ಭಕ್ತಿ - ವೈರಾಗ್ಯದ ಹಾಡುಗಳನ್ನು ಹಾಡಿ ಸುರರೊಳು ಸೇರುತ್ತಾನೆ .

ಗೆಜ್ಜೆಯ ಕಟ್ಟಿ ಖಳರೆದೆ ಮೆಟ್ಟಿದವರನ್ನು ಶ್ರೀ ಕೃಷ್ಣ ಪರಮಾತ್ಮ. ಹಸುಗೂಸಾಗಿದ್ದಾಗ ಗೆಜ್ಜೆ ಕಟ್ಟಿದ ಕಾಲಿನಿಂದ ಪೂತನಿ ರಕ್ಕಸಿಯ ಎದೆ ಮೆಟ್ಟಿ ಕುಟ್ಟಿದ. ಕಾಲುಗಳನ್ನು ಬಡಿದು ಶಕಟಾಸುರನನ್ನು ಕೊಂದ. ಸ್ವಲ್ಪ ದೊಡ್ಡವನಾದ ಮೇಲೆ ಅನೇಕ ರಾಕ್ಷಸರನ್ನು ಮೆಟ್ಟಿದುದೇ ಅಲ್ಲದೆ ನಾಗರಾಜನ ಹೆಡೆಗಳನ್ನು ಮೆಟ್ಟಿ ನಾಟ್ಯವಾಡಿ ಅವನ ದುಷ್ಟ ಬುದ್ಧಿ ದೂರಮಾಡಿದ.

ಮೂರು ವಿಧದ ರೋಗಗಳು, ಆರುವಿಧದ ಕಾಮಕ್ರೋಧಾದಿಗಳು ಮತ್ತು ಒಂಭತ್ತು ವಿಧದ ಮದಗಳು, ಖಳರಂತೆ ನಮ್ಮನ್ನು ಮೆಟ್ಟಿ ಮೆಟ್ಟಿ ಕಾಡುತ್ತಿರುತ್ತವೆ. ಈ ಖಳರುಗಳ ನಾಶವಾಗಬೇಕಾದರೆ ನಾವು ಕಾಲಿಗೆ ಗೆಜ್ಜೆ ಕಟ್ಟಿ ಲಜ್ಜೆ ಬಿಟ್ಟು ಹೆಜ್ಜೆ ಮೆಟ್ಟಿ ಆ ಮೂಜ್ಜಗದೊಡೆಯನ ಕೊಂಡಾಡುತ್ತಾ ನರ್ತನ ಸೇವೆ ಮಾಡಬೇಕು.

### ಗಾಯನ ಮಾಡಿದವ ಹರಿ ಮೂರುತಿ ನೋಡಿದವ

ಗಾಯನ ಮಾಡಿದವರು ಯಾರು ? ಅದನ್ನೂ ಕನಕದಾಸರೇ ಹೇಳಿದ್ದಾರೆ. ಒಳ್ಳೊಳ್ಳೆ ಪದಗಳ ಹನುಮಪ್ಪ ಹಾಡ್ಯಾನ್ಮ . ಹನುಮನ ಹಾಡು ಅಂದರೆ ಅದರ ಮುಂದೆ ನಾರದ-ತುಂಬುರು-ಗಂಧರ್ವರ ಹಾಡುಗಳನ್ನೆಲ್ಲ ನೀವಾಳಿಸಬೇಕು. ಕಲ್ಲು ಬಂಡೆಯೇ ಕರಗುವಂತೆ ಗಾಯನ ಮಾಡಿ **ಗುಂಡಕ್ರಿಯೆ** ರಾಗವನ್ನೇ ಸೃಷ್ಟಿಸಿದವರು ನಮ್ಮ ಹನುಮಂತ ದೇವರು. ಎಲ್ಲೆಲ್ಲೂ ತಮ್ಮ ಹೃದಯದಲ್ಲೂ ಸದಾ ಕಾಲ ರಾಮನನ್ನು ಕಂಡವರು **ಎಲ್ಲಿ ಹನುಮನೋ ಅಲ್ಲಿ ರಾಮ, ಹನುಮನ ಮತವೇ ಹರಿಯ ಮತವು.** ಹನುಮನ ಪಾದ ಹಿಡಿದು ಹರಿಯನ್ನು ಕಂಡವರು ನಮ್ಮ ಹರಿದಾಸರು. ಅವರ ಪಾದ ಹಿಡಿದರೆ ನಾವೂ ಸಹ ಹರಿಯನ್ನು ಕಾಣಬಹುದು.

ಹರಿಯನ್ನು ಕಂಡಮೇಲೆ ಕೇಳಬೇಕೆ ! ಪುರಂದರವಿಟ್ಠಲನನ್ನು ಕಂಡವ ವೈಕುಂಠಕ್ಕೆ ಓಡುವನು. ಅಲ್ಲಿ ರೋಗ ರುಜಿನಗಳಿಲ್ಲ ಕ್ಲೇಶ ದುಃಖಗಳಿಲ್ಲ, ಅಲ್ಲಿ ಸರ್ವರೂ ಸುಖದಲ್ಲಿ ಇಪ್ಪರು, ಯಶಸ್ವಿಗಳು, ಸಹಾಯಪರರು. ಅಲ್ಲಿ ಕಸವೇ ಪರಿಮಳ. ನಿತ್ಯ ಕುಸುಮದ ಮಳೆ.

**ಲೇಖಕಿ: ಡಾ|| ಎನ್.ಜಿ.ವಿಜಯಲಕ್ಷ್ಮಿರಾಘವೇಂದ್ರಾಚಾರ್ಯ(ಮಂಗಳಾಂಗ ಹರಿವಿಟ್ಠಲದಾಸಿ)**
**333, 12ನೇ ಮುಖ್ಯರಸ್ತೆ ಗೋಕುಲ ಬಡಾವಣೆ ,ಮತ್ತಿಕೆರೆ ಬೆಂಗಳೂರು - 560054**

ಪುರಂದರದಾಸರ

ಉಗಾಭೋಗ ಅಧ್ಯಯನ

# ಶರಣಾಗತಿಯ ಭಾವದಲಿ ಉಗಾಭೋಗ ಸಂಪದ

ಉಗಾಭೋಗ, ಹರಿದಾಸ ಸಾಹಿತ್ಯದ ಒಂದು ಪ್ರಕಾರವಾದರೆ ಸುಳಾದಿ ತತ್ವಪ್ರಧಾನವಾದ ಇನ್ನೊಂದು ಪ್ರಕಾರ. ಉಗಾಭೋಗಗಳಲ್ಲಿ ರಾಗ, ತಾಳಗಳ, ಕಟ್ಟಿಲ್ಲ, ಸುಮಾರು 500 ಉಗಾಭೋಗಗಳು ಬಳಕೆಯಲ್ಲಿವೆ. ಇತ್ತೀಚೆಗೆ ಉಗಾಭೋಗಗಳನ್ನು ಹಾಡುವ ಸಂಪ್ರದಾಯ ಮಾಯವಾಗುತ್ತಲಿದೆ. ಭಕ್ತಿ ಪ್ರಧಾನವಾದ ಪುರಂದರದಾಸರ ಉಗಾಭೋಗ ಈ ಕೆಳಗಿನಂತಿದೆ.

**ನಿನ್ನನೆ ಪಾಡುವೆ ನಿನ್ನನೆ ಪೊಗಳುವೆ**
**ನಿನ್ನನೆ ಬೇಡಿ ಬೇಸರಿಸುವೆ**
**ನಿನ್ನ ಕಾಲನು ಪಿಡಿವೆ ನಿನ್ನ ಹಾರೈಸುವೆ**
**ನಿನ್ನ ತೊಂಡರಿಗೆ ಕೈ ಕೊಡುವೆ**
**ನಿನ್ನಂತೆ ಸಾಕಬಲ್ಲದೇವರುಂಟೆ**
**ಚೆನ್ನ ಪುರಂದರವಿಠಲ ದೇವರದೇವ ॥**

ಪರಮಾತ್ಮನಿಗೆ ಸಂಪೂರ್ಣ ಶರಣಾಗತಿಯಭಾವ ಈ ವಿಧ್ಯ (ಉಗಾಭೋಗ)ದಲ್ಲಿ ವಿದಿತವಾಗುತ್ತದೆ. ಉಗಾಭೋಗವನ್ನು ಯಾವರಾಗದಲ್ಲಿಯೂ ಹಾಡಬಹುದು. ಉಗಾಭೋಗ ಇಷ್ಟೇ ಸಾಲುಗಳಿರಬೇಕೆಂಬ ನಿಯಮವಿಲ್ಲ .

**ಗುರುಕರುಣ ಹೊಂದುವುದು ಪರಮದುರ್ಲಭವಯ್ಯ । ಪರಿಪರಿ**
**ವ್ರತಗಳಾಚರಿಸಲು ಫಲವೇನು । ಶರೀರಾದಿ ಪುತ್ರ ಮಿತ್ರಕಳತ್ರ**
**ಬಾಂಧವರು ಇರಿಸೋಕಿ ಸದ್ಗತಿಗೆ ಸಾಧನದಿ । ನಿರುತವುಗುರು**
**ಪಾದ ನಿಜವಾಗಿ ಮನದಲ್ಲರಿತು ಭಜಸಿಲು । ಅಖಿಳಸಂಪದ**
**ವಕ್ಕು ಪುರಂದರವಿಠಲ ॥**

**ಲೇಖಕ: ಶ್ರೀ ಜನಾರ್ದನ ಕಟ್ಟಿ** B.E. (Civil)
**ನಿವೃತ್ತ ಅಧೀಕ್ಷಕ ಅಭಿಯಂತರರು, ಎನ್.ಜಿ.ಓ ಕಾಲನಿ ಕಲಬುರಗಿ - 585102**



ಪುರಂದರದಾಸರ

ಉಗಾಭೋಗ ಅಧ್ಯಯನ

# ವೈಶಿಷ್ಟ್ಯಪೂರ್ಣ ಪುರಂದರದಾಸರ ಉಗಾಭೋಗಗಳು

ಕರ್ನಾಟಕ ಸಂಗೀತ ಪಿತಾಮಹರೆನಿಸಿ, ಮಹಾವಾಗ್ಗೇಯಕಾರರಾಗಿ ಮೆರೆದ ನಾರದಾಂಶ ಸಂಭೂತ, ಶ್ರೀ ಪುರಂದರದಾಸರು ಜನತೆಯ ಆಡುಮಾತುಗಳಲ್ಲಿ, ಅವರ ಮನಮುಟ್ಟುವಂತೆ ಮಧ್ವಮತತತ್ವಗಳು, ಹಿತೋಪದೇಶಾದಿಗಳು, ಕೀರ್ತನೆ, ಸುಳಾದಿ, ಉಗಾಭೋಗಗಳ ರೂಪದಲ್ಲಿ ಕರುಣಿಸಿದ್ದಾರೆ.

ಸಾವಿರಾರು ಸಂಖ್ಯೆಯಲ್ಲಿರುವ ಪುರಂದರದಾಸರ ಉಗಾಭೋಗಗಳು ಅತ್ಯಂತ ಸರಳ ಸ್ಪಷ್ಟಭಾಷೆಯಲ್ಲಿ, ಮನಸೂರೆಗೊಳ್ಳುವದಾಗಿ, ರಾಗ, ತಾಳಗಳ ನಿರ್ಬಂಧ ಒಳಗಾಗದೇ, ಶ್ರೀದಾಸರಾಯರ ಅನುಭವ, ಅನಿಸಿಕೆಗಳು, ತಾವು ಜನತೆಗೆ ತಲುಪಬೇಕಾದ, ಉಪದೇಶಿಸಬೇಕಾದ ವಿಷಯಗಳ ಸ್ಪಷ್ಟನಿರೂಪಣೆ ಹೊಂದಿವೆ. ಶ್ರೀ ದಾಸರ ಉಗಾಭೋಗಗಳು ಅರ್ಥವತ್ತಾಗಿ, ಜ್ಞಾನ, ಭಕ್ತಿ, ವೈರಾಗ್ಯಗಳ ಉದಯಕ್ಕೆ ಕಾರಣೀಭೂತವಾಗಿವೆ.

ಡಂಭಾಚಾರ, ಅನಾಚಾರಗಳ ಬಗೆಗೆ ಶ್ರೀ ದಾಸರು ದೃಷ್ಟಾಂತಪೂರ್ವಕ ಖಂಡಿಸುವ ಉಗಾಭೋಗಗಳು ಹೇರಳವಾಗಿವೆ.

ಶ್ರೀಹರಿಯದಾಸತ್ವದ ಹಿರಿಮೆಯನ್ನು ತಿಳಿಸುತ್ತಾ ಶ್ರೀಹರಿಯ ಸೇವಿಸದ ಜೀವನ ವ್ಯರ್ಥವೆನ್ನುತ್ತಾರೆ. **ಕೋಳಿಗೆ ಎತಕ್ಕೆ ಹೊನ್ನುಪಂಜರವು । ಬೋಳಿಗೆ ಏತಕ್ಕೆ ಜಾಜಿಮಲ್ಲಿಗೆ ದಂಡೆ । ಆಳಿಲ್ಲದವನಿಗೆ ಅರಸು ತನವೇತಕೆ । ಮೂಳಿಗೆ ಮನೆಯು ಬಡವಗಿನ್ನೇತಕೆ । ನಿನ್ನ ಊಳಿಗೆ ಮಾಡದವನ ಬಾಳು ಇನ್ನೇತಕೆ ॥ ಕೇಳಯ್ಯ ದೇವ ಪುರಂದರವಿಠಲ.**

**ಲೇಖಕ : ತ್ರಿವಿಕ್ರಮ ಪ್ರಹ್ಲಾದಾಚಾರ್ಯ,**
**25/4, ಬ್ರಾಹ್ಮಣ ಬೀದಿ, ಎಂ.ಎಂ.ರೋಡ್, ಆದವಾನಿ - 518301**
**ಲೇಖಕಿ: ಶಾರದಾಬಾಯಿ ಕೃಷ್ಣಮೂರ್ತಿ**
**56/2 ಮೌದ್ಗಲ್ಯ ಪುಟ್ಟಣ್ಣರಸ್ತೆ, ಬಸವನಗುಡಿ, ಬೆಂಗಳೂರು - 560004**

ಪುರಂದರದಾಸರ

ಉಗಾಭೋಗ ಅಧ್ಯಯನ

## ಪುರಂದರದಾಸರ ಉಗಾಭೋಗಗಳು - ಚೇತೋಹಾರಿ

ಉಗಾಭೋಗ ಎಂಬುದು ಉದ್ಗ್ರಾಹ, ಆಭೋಗಗಳ ಸಹಸ್ಪಂದನವೆಂದು ಅಭಿಪ್ರಾಯವುಂಟು. ಎಂದರೆ ಒಂದು ರಾಗವನ್ನು ಎತ್ತಿಕೊಂಡು ಅದು ಶುದ್ಧ ಹಾಗೂ ಸುಖವಾದ ಸಂಚಾರವಿದ್ದು, ಯಾವ ತೀವ್ರತೆಗಳಿಲ್ಲದೆಯೇ ಸಮಾನ ನಡೆ ಸಾಧಿಸುವ ಪರಿ ಎಂದೂ ಹೇಳುತ್ತಾರೆ. ಒಂದಕ್ಕೊಂದು ಅರಳಿಕೊಳ್ಳುವ ಪದಜೋಡಣೆ, ಭಕ್ತಿಪ್ರದಾನ ನಿರೂಪಣೆ, ಆಧ್ಯಾತ್ಮಿಕ ವಸ್ತು ಗದ್ಯಶೈಲಿ, ರಾಗದ ಸುಖಸಂಚಾರ. ಹಾಗಾಗಿ, ಕೇಳಲು ಮೃದು, ಹಿತ. ಈಗ ಇದೊಂದು ಉತ್ತಮ ಗೇಯಪ್ರಾಕಾರವಾಗಿದೆ. ಈಚೆಗೆ ಸಂಗೀತಗಾರರು ಒಂದು ದೇವರನಾಮ ಪ್ರಾರಂಭಿಸುವುದಕ್ಕೆ ಮುಂಚೆ ಅದಕ್ಕೆ ಸಂಗತವಾಗಿ ನಿಲ್ಲ ಬಲ್ಲ ಉಗಾಭೋಗವೊಂದನ್ನು ಹಾಡುವ ಪದ್ಧತಿ ಹೆಚ್ಚುತ್ತಿದೆ. ಪುರಂದರದಾಸರ ಉಗಾಭೋಗಗಳು ಬಿಂದುವಿನಲ್ಲಿ ಸಿಂಧುವನ್ನು ನೋಡಿಸುವಷ್ಟು ಸಮರ್ಥವಾಗಿವೆ. ಅವರ ಉಗಾಭೋಗಗಳ ವೈಶಿಷ್ಟವೆಂದರೆ ಸಂಕ್ಷಿಪ್ತವಾಗಿದ್ದರೂ ಸಮಗ್ರವಾದ ಅರ್ಥವನ್ನು ಅಭಿವ್ಯಕ್ತಿಸುವಲ್ಲಿ ಸಶಕ್ತವಾಗಿವೆ. ಸ್ಫೂರ್ತಿಯ ಸೆಲೆ ಉಕ್ಕಿದಾಗ ಉಗಾಭೋಗ ಪ್ರಕಟವಾಗಿದೆ.

**ಲೇಖಕ: ಡಾ|| ಅರಳುಮಲ್ಲಿಗೆ ಪಾರ್ಥಸಾರಥಿ**

**ನಂ. 1120, 7ನೇ ಅಡ್ಡರಸ್ತೆ, ಗಿರಿನಗರ, ಬೆಂಗಳೂರು-85**

## ಗೋಪಿಚಂದನ ಮಹಿಮೆ

ಗೋಪೀಚಂದನ ಮಹಾತ್ಮೆ ತಿಳಿಸುವ ಆಹ್ನಿಕ ವಿಭಾಗದ ಉಗಾಭೋಗ ಇಲ್ಲಿದೆ.

ಅಂದವಿಲ್ಲದ ಅಶಕ್ತನಿಗೆ ಒಂದೆ ಅರಿವೆಯ ಲಿಂದ । ವೈದೊಳೆದು ಮಡಿಯುಟ್ಟು ನಾಮಗಳನಿಟ್ಟು। ಚಂದದಲಿ ಸಂಧ್ಯಾವಂದನೆ ಮಾಡೆಫಲವಹುದು। ನಿಂದೆ ಹಿಂಗಲೆಂದು ಮಾಡಿದಾ ಮನುಜರಿಗೆ । ಇಂದ್ರ ಹದಿನಾಲ್ಕು ಮನುನರಕವೆಂದು। ಅಂದು ಪುರಂದರವಿಠಲ ಪೇಳಿದುದು ಸತ್ಯ||

**ಲೇಖಕ:ಹೆಚ್.ಪಿ.ನಾಗಾರಾಜ್**

**ಶ್ರೀಹರಿ ನಿವಾಸ, ಟಿ.ಬಿ.ರೋಡ್, ಕಡೂರು - 577 548, ಚಿಕ್ಕಮಗಳೂರು ಜಿಲ್ಲೆ**



ಪುರಂದರದಾಸರ

ಉಗಾಭೋಗ ಅಧ್ಯಯನ

## ನೇರ, ದಿಟ್ಟ, ನಿರಂತರ ಹರಿವು - ಉಗಾಭೋಗದ ಅರಿವು

ದಾಸ ಸಾಹಿತ್ಯ ಸುಪ್ರಸಿದ್ಧಿ ಹೊಂದಿದ್ದು ಅದರ ಕೀರ್ತನೆಗಳ ಮೂಲಕ. ಕೀರ್ತನೆಗಳು ಪ್ರಾಸ, ಲಯ, ಗಮಕಗಳನ್ನು ಒಳಗೊಂಡ ಅದ್ಭುತ ಕೃತಿಗಳು. ದಾಸ ಸಾಹಿತ್ಯದ ಇನ್ನೊಂದು ವಿಶಿಷ್ಟ ಕೊಡುಗೆಗಳೇ ಉಗಾಭೋಗಗಳು. ವಿಷಯಗಳನ್ನು ವಿವರವಾಗಿ ಹರವಿ ಹಾಡುವ ರಾಗಗಳು ಕೀರ್ತನೆಗಳಾದರೆ, ಆ ಹಾಡಿನ ಸಾರಾಂಶವನ್ನು ಸ್ಪಷ್ಟವಾಗಿ, ಸ್ಫುಟವಾಗಿ, ನೇರವಾಗಿ, ಚಿಕ್ಕದಾಗಿ ಹೇಳುವ ಪರಿಯೇ ಉಗಾಭೋಗಗಳು.

ಕರೆದರೆ ಬರುವ ಕರುಣಾಳು ಅವನು. ಎಷ್ಟೊಂದು ಸುಂದರ ಉದಾಹರಣೆಗಳೊಂದಿಗೆ ದಾಸರು ವಿವರಿಸಿದ್ದಾರೆ. ಅವರವರ ಭಾವಕ್ಕೆ, ಅವರವರ ಪ್ರಾರ್ಥನೆ, ಅವರ ಅವಶ್ಯಕತೆಗೆ ಅನುಗುಣವಾಗಿ, ದರ್ಶನ ಭಾಗ್ಯ ನೀಡುತ್ತಾನೆ. ಬಲಿ ಚಕ್ರವರ್ತಿಯ ಬಳಿಗೆ ಬಂದು, ಅವನಿಗೆ ಮುಕ್ತಿಯನ್ನೇ ಪಾಲಿಸಿದ. ಭಗೀರಥನ ಭಕ್ತಿಗೆ ಮೆಚ್ಚಿ ಅವನ ಪೂರ್ವಜರನ್ನು ಮುಕ್ತಿಗೊಳಿಸಿದ. ಪ್ರೀತಿಯಿಂದ ಕರೆದ ಗೋಪಿಕಾ ಸ್ತ್ರೀಯರಿಗೆ ಗೋವಿಂದನಾದ. ದುರ್ಯೋಧನನ ಆಮಂತ್ರಣಕ್ಕೆ ಬಾಗದೇ, ವಿದುರನ, ಆತ್ಮೀಯತೆಗೆ ಒಲಿದ. ರಾವಣನ ತಮ್ಮನಾದರೂ ವಿಭೀಷಣನ ಸಾತ್ವಿಕತೆಗೆ ವರನೀಡಿದ . ಇಂತಹ ಮಹಾತ್ಮರ ಸಾಲಿನಲ್ಲಿ ನಮ್ಮಂತ ಪಾಮರರು ನಿಲ್ಲುವುದು, ಹೋಲಿಸಿ ಕೊಳ್ಳುವುದು ಅಪರಾಧವಾದರೂ, ಕರುಣಾಳು ಪರಮಾತ್ಮ ನಮ್ಮನ್ನು ಕೇವಲ ಅವನ ನಾಮಸ್ಮರಣೆಯಿಂದ ಕಾಪಾಡುತ್ತಾನೆಂದು, ಪುರಂದರದಾಸರ ಉಗಾಭೋಗ ತಿಳಿಸುತ್ತದೆ.

**ಲೇಖಕಿ: ಶ್ರೀಮತಿ.ವಾಣಿಶ್ರೀ.ಆ.ರಘುವೀರ,**

**ಜ್ಞಾನ ಸಂಗಮ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ - 590014.**

**ಶ್ರೀಭಾವಿಸಮೀರ ಗುರುಕುಲ**
**ಶ್ರೀಸೋದೆ ವಾದಿರಾಜಮಠ, ಸೋದೆ, ಶಿರ್ಶಿ ತಾ||**

ಶ್ರೀವಾದಿರಾಜರ ಆರಾಧನಾ ಅಂಗವಾಗಿ 2-3-2010ರಂದು ಮುಖೋದ್ಗತ ಪರೀಕ್ಷೆಯನ್ನು ಏರ್ಪಡಿಸಲಾಗಿದೆ.

ವಿಷಯ:- **ತೀರ್ಥಪ್ರಬಂಧ,**
**ಶ್ರೀಸ್ವಾಪ್ನವೃಂದಾವನಾಖ್ಯಾನ ಮೊದಲ ನಾಲ್ಕು ಅಧ್ಯಾಯಗಳು**

ಭಾಗವಹಿಸಲು ಇಚ್ಛಿಸುವವರು ಮುಂಚಿತವಾಗಿ ತಮ್ಮ ಹೆಸರನ್ನು ನೊಂದಾಯಿಸಕೊಳ್ಳಬೇಕೆಂದು ತಿಳಿಸುತ್ತೇವೆ.

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: **ಶ್ರೀವಾದಿರಾಜಾಚಾರ್ಯ,**
ಶ್ರೀಭಾವಿಸಮೀರ ಗುರುಕುಲ ಸೋದೆ, ದೂರವಾಣಿ: 9379070025

**ಪುರಂದರದಾಸರ**

**ಉಗಾಭೋಗ ಅಧ್ಯಯನ**

## ಉದ್ಧಾರಕ್ಕಾಗಿ ಉಗಾಭೋಗ

ಸಮಾಜದಲ್ಲಿ ಶಾಂತಿ ಹಾಗೂ ಸೌಹಾರ್ದತೆ ನೆಲೆಸುವಲ್ಲಿ ಪುರಂದರದಾಸರ ಕೊಡುಗೆ ಅಪಾರ. ಸಮಾಜದ ಉನ್ನತಿ ಹಾಗೂ ಜನರ ಕಲ್ಯಾಣಕ್ಕೆ ದಾಸರು ತುಂಬಾ ಶ್ರಮಿಸಿದ್ದಾರೆ. ದಾಸರ ಚಿಂತನೆಗಳು ಹಿಂದೂ ಸಮಾಜವನ್ನು ಒಗ್ಗೂಡಿಸಿದೆ. ಅವರು ತಮ್ಮ ಉಗಾಭೋಗ, ಸುಳಾದಿ ಹಾಗೂ ಇತರ ಕೃತಿಗಳಲ್ಲಿ ತೋರಿದ ಮಾರ್ಗದಲ್ಲಿ ನಡೆಯುವುದು ಮಾನವ ಸಮಾಜಕ್ಕೆ ಒಳಿತೆಂಬುದರಲ್ಲಿ ಎರಡು ಮಾತಿಲ್ಲ.

ಭರತ ಖಂಡದ ವೈದಿಕ ಅವೈದಿಕ ಮತಗಳಲ್ಲಿ ಸಹ ಸರ್ವ ಸಮ್ಮತವಾಗುವ ವಿಷಯಗಳನ್ನಾರಿಸಿ, ಸಮರಸವೇ ಜೀವನವೆಂದು ತೋರಿಸಿದವರೆಂದರೆ ಪುರಂದರದಾಸರು. ವಾದಗ್ರಸ್ತ ವಿಷಯಗಳು ಬಂದಾಗ ತತ್ವ ನಿಶ್ಚಯ ಮಾಡಿ ಜನರಿಗೆ ತೋರಿಸಿಕೊಟ್ಟು ವಿವಾದಗಳನ್ನು ನಿರ್ವಿವಾದ ಗೊಳಿಸಿದ ಪುರಂದರದಾಸರು, ಸೊಲ್ಲಾಪುರದ ಬ್ರಾಹ್ಮಣ - ಲಿಂಗಾಯತ ವಿವಾದದಲ್ಲಿ ಜಂಗಮರು ಎಂಬ ಪದವನ್ನು ಹಾಡಿ ಉಭಯ ಸಮಾಜಗಳ ದ್ವೇಷವನ್ನು ಪರಿಹರಿಸಿದ ಮಹಾನುಭಾವರು.

**ದುಷ್ಟರ ಸಂಗವ ಬಿಡುವುದೇ ಸ್ನಾನ, ಶಿಷ್ಟರ ಸಂಗದೊಳಿರುವುದೇ ಸ್ನಾನ; ಸೃಷ್ಟಿಯೊಳಗೆ ಶ್ರೀಪುರಂದರ ವಿಠಲನ ಮುಟ್ಟಿ ಭಜಿಸಿದರೆ ವಿರಜಾಸ್ನಾನ ।।3।।**

ಪದದ ಪ್ರತಿ ಮಾಲೆಗೂ ಸ್ಮೃತಿ ಪುರಾಣ ವಾಕ್ಯಗಳನ್ನು ಉದಾಹರಿಸಿ ಕೀರ್ತನ ಮಾಡಿದ್ದಾರೆ ದಾಸರು.

ಪುರಂದರದಾಸರ ಉಗಾಭೋಗಗಳಲ್ಲಿ ತತ್ವ, ವಿಮರ್ಶೆ, ವಿಡಂಬನೆ, ಸ್ತುತಿ, ನಿಂದೆ ಮುಂತಾದ ವಿವಿಧೋಕ್ತಿಗಳನ್ನು ಹಾಗೂ ಮಧುರ, ವಾತ್ಸಲ್ಯ ಮುಂತಾದ ನವವಿಧ ಭಕ್ತಿಗಳ ರಸಾವೇಶವನ್ನು ಕಾಣುತ್ತೇವೆ. ಅವರ ಉಗಾಭೋಗಗಳಲ್ಲಿ ಜನಮನ ಬಿಂಬಿತವಾಗಿದೆ. ಕಾವ್ಯದ ಕಳೆ ತಿಳಿಗನ್ನಡದಲ್ಲಿ ಅಭಿವ್ಯಂಜಿಸಿದೆ.

**ಲೇಖಕ :ಯು.ಎಸ್.ಶ್ರೀನಿವಾಸರಾವ್**
**938, ಆಶೀರ್ವಾದ, 7ನೇ ಬ್ಲಾಕ್, ಕಾಳಿದಾಸ ನಗರ, ಹೊಸಕೆರೆಹಳ್ಳಿ, ಬೆಂಗಳೂರು-85**



**ಪುರಂದರದಾಸರ**

**ಉಗಾಭೋಗ ಅಧ್ಯಯನ**

## ಕಳ್ಳನಿಗೆ ಭಕ್ತಿಯ ಸಂಕೋಲೆ

**ನಿನ್ನ ನಾಮ ಭಂಡಾರ ಕದ್ದ ಕಳ್ಳನು ನಾನು**
**ನಿನ್ನ ಭಕುತಿಯೆಂಬ ಸಂಕೋಲೆಯನಿಕ್ಕಿ**
**ನಿನ್ನ ದಾಸರ ಕೈಯಲ್ಲಿ ಒಪ್ಪಿಸಿಕೊಳ್ಳು**
**ನಿನ್ನ ಮುದ್ರಿಕೆಯಿಂದ ಕಾಸಿ ಬಡಿಸು ದೇವ**
**ನಿನ್ನ ವೈಕುಂಠ ದುರ್ಗದೊಳು**
**ಎನ್ನ ಸೆರೆಯೊಳಟ್ಟು ಸಲಹೋ ಪುರಂದರವಿಠಲ.**

ಈ ಉಗಾಭೋಗದಲ್ಲಿ ದಾಸರು ದೇವರ ನಾಮಭಂಡಾರವನ್ನು ಕದ್ದ ಕಳ್ಳ ತಾನೆಂದು ಆರೋಪಿಸಿಕೊಂಡು, ಅದಕ್ಕೆ ಶಿಕ್ಷೆಯೆಂದರೆ ವೈಕುಂಠವೆಂಬ ಸೆರೆಮನೆಯೊಳಿಟ್ಟು ಸಲಹೆಂದು ಆ ಮೂಲಕ ದೇವರ ಸಾನಿಧ್ಯವನ್ನು ಬಯಸುವ ವಿಧಾನ ಅತ್ಯಂತ ವಿಶಿಷ್ಟವಾಗಿದೆ.

ಭಗವಂತನ ನಾಮ ಅತ್ಯಮೂಲ್ಯ. ಅಂತಹ ನಾಮ ಭಂಡಾರ ಕದ್ದ ಕಳ್ಳನಿಗೆ ಭಕ್ತಿಯ ಸಂಕೋಲೆ. ಕಳ್ಳನಿಗೆ ಭಕ್ತಿಯ ಸಂಕೋಲೆಯಿಂದ ಬಂಧಿಸು ಎಂದು ಆತನಿಗೆ ಕೇಳಿಕೊಳ್ಳುತ್ತಾ ಶಿಕ್ಷೆಯಾಗಬೇಕಾದರೆ ನಿನ್ನ ದಾಸರ ಕೈಗೇ ಒಪ್ಪಿಸು ನನ್ನನ್ನು. ನಿನ್ನ ಮುದ್ರಿಕೆಯಿಂದ ಕಾಸಿ ಬಡಿಸು, ದೇವ, ಎಂದೆನ್ನುತ್ತಾರೆ.

ಒಳ್ಳೆಯ ಗುರಿಯನ್ನು ಸಾಧಿಸುವದಕ್ಕಾಗಿ ಸದಾಗ್ರಹವೊಂದು ಹೇಗೆ ಸಾಧನವಾಗಬಲ್ಲುದೋ ಹಾಗೆಯೇ ವೈಕುಂಠ ವಾಸವನ್ನು ಬಯಸುವ ಭಗವಂತನ ಸಾನ್ನಿಧ್ಯದಲ್ಲಿಯೇ ಇರಬಯಸುವ ಭಕ್ತ ಇಂತಹ ಚೌರ್ಯದ ಅಪರಾಧವನ್ನು ನಿರ್ಭಯದಿಂದ ಮಾಡುತ್ತಾನೆನ್ನುವ ದಾಸರ ನಿರೂಪಣೆ ಬೆರುಗುಗೊಳಿಸುವಂತಿದೆ.

ಭಕ್ತನಿಗೆ ಇದು ಶಿಕ್ಷೆಯಲ್ಲ.ಭಗವಂತನನ್ನು ಹೊಂದುವ ಅಪೇಕ್ಷೆ ಭಗವನ್ನಾಮದಲ್ಲಿರುವ ದಾಸರ ಅಚಲ ವಿಶ್ವಾಸ ಅದ್ವಿತೀಯವಾದುದು.

**ಲೇಖಕಿ: ಸೌ।। ಪುಷ್ಪಾ ಮೋಹನ ಮುದಕವಿ**
**ನಂ.20/671, 2ನೇ ಅಡ್ಡರಸ್ತೆ, ಕಿರ್ಲೋಸ್ಕರ್ ಕಾಲೋನಿ, 2ನೇ ಹಂತ, ಬೆಂಗಳೂರು-79**